ನಿಮ್ಮೂರು ಸುದ್ದಿ

ಕನ್ನಡ ದಿನ ಪತ್ರಿಕೆ NIMMURU SUDDI

ಸಂಪಾದಕರು: ಸುಂದರ್

Editor : Sundar

ಏಕ ಕಾಲಕ್ಕೆ ಬಳ್ಳಾರಿ, ಕೊಪ್ಪಳ, ಯಾದಗಿರಿ, ರಾಯಚೂರು, ಕಲಬುರ್ಗಿ, ಬೀದರ, ವಿಜಯನಗರ ಜಿಲ್ಲೆಗಳಲ್ಲಿ ಪ್ರಕಟ

Volume: 01, Issue: 42 RNI Number : KNKAN/25/A2770 15-02-2026 Sunday Page 04, Price 2/- suddinimmuru@gmail.com Mob:-8660146563

ಸಂಪುಟ :01 ಸಂಚಿಕೆ :42 ರಾಯಚೂರು 15-02-2026 ರವಿವಾರ ಪುಟ 04 ಬೆಲೆ ರೂ.2/- ಮೊ:8660146563

ಮೈತ್ರಿ ವಿಚಾರದಲ್ಲಿ ಮುಕ್ತವಾಗಿದ್ದೇವೆ, ಯಾವುದೇ ಗೊಂದಲಕ್ಕೆ ಅವಕಾಶ ಕೊಡಬಾರದು: ಹೆಚ್‌ಡಿಕೆ

ಬೆಂಗಳೂರು,ಫೆ.14-

ಮೈತ್ರಿ ವಿಚಾರದಲ್ಲಿ ಸಂಪೂರ್ಣವಾಗಿ ನಾವು ಮುಕ್ತವಾಗಿದ್ದೇವೆ. ಜನರಲ್ಲಿ ಯಾವುದೇ ಗೊಂದಲಗಳಿಗೆ ಅವಕಾಶ ಕೊಡಬಾರದು ಎಂದು ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಕಿವಿ ಮಾತು ಹೇಳಿದರು.

ಪಕ್ಷದ ಕಚೇರಿ ಜೆ.ಪಿ.ಭವನದಲ್ಲಿ ಮಾತನಾಡಿದ ಅವರು, ಜಿಬಿಎ ಚುನಾವಣೆ ವಿಚಾರವಾಗಿ ಪ್ರತಿಕ್ರಿಯಿಸುತ್ತಾ, ಎಲ್ಲ ಪಕ್ಷಗಳು ಜಿಬಿಎ, ಜಿ.ಪಂ, ತಾ.ಪಂ ಚುನಾವಣೆ ಸಿದ್ಧತೆ ಮಾಡಿಕೊಳ್ಳುತ್ತಿದ್ದಾರೆ. ಈಗ ಚುನಾವಣೆ ನಡೆಯುವ ವಾತಾವರಣ ಇದೆ. ಬೆಂಗಳೂರು ಜಿಬಿಎ ಚುನಾವಣೆಗಾಗಿಯೇ ನಾವು ಕೂಡ ಸಭೆ ಕರೆದಿದ್ದೇವೆ. ಮುಂದಿನ ನಮ್ಮ ನಡೆ ಏನಾಗಿರಬೇಕು ಎಂಬ ಚರ್ಚೆ ಮಾಡ್ತೇವೆ. ಮೈತ್ರಿ ವಿಷಯದಲ್ಲಿ ಈ ಕ್ಷಣದವರೆಗೆ ನಾವೇ ಚರ್ಚೆ ಮಾಡಿಲ್ಲ. ಚರ್ಚೆ ಯಾವಾಗ ಮಾಡಬೇಕು ಆ ಸಮಯಕ್ಕೆ ಮಾಡುತ್ತೇವೆ. ವೈಯುಕ್ತಿಕ ಹೇಳಿಕೆಗಳ ಬಗ್ಗೆ ಚರ್ಚೆ ಮಾಡಲು ಹೋಗಲ್ಲ ಎಂದರು.

ವೈಯಕ್ತಿಕ ಹೇಳಿಕೆಗೆ ಉತ್ತರ ಅನಾವಶ್ಯಕ: ಒಂದೊಂದು ಪಕ್ಷದಲ್ಲಿ ಒಂದೊಂದು ರೀತಿ ಚರ್ಚೆ ಮಾಡುತ್ತಾರೆ. ಕೆಲವರು ಮಾತಾಡ್ತಾರೆ, ಅದೇ ಅಂತಿಮ ಅಲ್ಲ. ಅಸೆಂಬ್ಲಿ ಚುನಾವಣೆಗೆ ಎರಡು ವರ್ಷ ಇದೆ. ಜಿ.ಪಂ ಚುನಾವಣೆಗೆ ಇನ್ನೂ ನಾಲ್ಕೈದು ತಿಂಗಳಿದೆ. ಆ ಸಮಯ ಬಂದಾಗ ಚರ್ಚೆ ಮಾಡೋಣ. ವೈಯುಕ್ತಿಕ ಹೇಳಿಕೆಗಳಿಗೆ ಉತ್ತರ ಕೊಡೋದು ಅನಾವಶ್ಯಕ ಎಂದು ತಿಳಿಸಿದರು.



ಜೆಡಿಎಸ್ ಜೊತೆ ಮೈತ್ರಿಗೆ ಮಂಡ್ಯ, ಹಾಸನ ಬಿಜೆಪಿ ನಾಯಕರ ವಿರೋಧ ವಿಚಾರವಾಗಿ ಪ್ರತಿಕ್ರಿಯಿಸಿ, ವ್ಯಕ್ತಿಗಳ ಹೇಳಿಕೆ ಬಗ್ಗೆ ನಾನು ಚರ್ಚೆ ಮಾಡೋಕೆ ಹೋಗುವುದಿಲ್ಲ. ಒಂದೊಂದು ಪಕ್ಷದಲ್ಲಿ ಒಂದೊಂದು ರೀತಿ ಚರ್ಚೆ ಮಾಡ್ತಾರೆ. ಕೆಲವರು ಅದರ ಬಗ್ಗೆ ಮಾತಾಡ್ತಾರೆ. ಕೆಲವರು ಮಾತಾಡೋದೇ ಅಂತಿಮ ಅಲ್ಲ. ವಿಧಾನಸಭೆ ಚುನಾವಣೆ ಎರಡು ವರ್ಷ ಇದೆ. ಸ್ಥಳೀಯ ಸಂಸ್ಥೆ ಚುನಾವಣೆ 4-5 ತಿಂಗಳು ಇದೆ. ಅ ಸಮಯ ಬಂದಾಗ ಚರ್ಚೆ ಮಾಡೋಣ. ವೈಯ್ಯಕ್ತಿಕವಾಗಿ ಮಾತಾಡೋರಿಗೆ ನಾನು ಉತ್ತರ ಕೊಡೋದು ಅನಾವಶ್ಯಕ ಎಂದು ಪ್ರೀತಂಗೌಡ, ನಾರಾಯಣಗೌಡ ಹೇಳಿಕೆಗೆ ಕುಮಾರಸ್ವಾಮಿ ತಿರುಗೇಟು ನೀಡಿದರು.

113 ಸ್ಥಾನ ಪಡೆದು ಕುಮಾರಸ್ವಾಮಿ ಬೇಕಾದ್ರೆ ಸಿಎಂ ಆಗಲಿ ಎಂಬ ಛಲವಾದಿ ನಾರಾಯಣಸ್ವಾಮಿ ಹೇಳಿಕೆ ವಿಚಾರವಾಗಿ ಮಾತನಾಡಿ, ನಾನು ಇಲ್ಲಿವರೆಗೂ ನಿಮ್ಮ ಮುಂದೆ ನೂರು ಬಾರಿ ಹೇಳಿದ್ದೇನೆ. ರಾಜ್ಯದಲ್ಲಿ ಇರೋ ಇಂತಹ ಭ್ರಷ್ಟ, ಕೆಟ್ಟ ಸರ್ಕಾರ ತೆಗೆಯಬೇಕು ಅನ್ನೋದು ನನ್ನ ಅಭಿಪ್ರಾಯ. ಮುಖ್ಯಮಂತ್ರಿ ಆಗೋದೆಲ್ಲ ಆಮೇಲೆ. ಈ ರಾಜ್ಯದಲ್ಲಿ ಉತ್ತಮವಾದ ಸರ್ಕಾರ, ಜನಪರವಾದ ಸರ್ಕಾರ ಬರಬೇಕು ಅನ್ನೋದು ನನ್ನ ಅಭಿಪ್ರಾಯ. ಜನರ ಭಾವನೆಗೆ ಸ್ಪಂದಿಸೋ ಸರ್ಕಾರ ಬೇಕು. ಇಂತಹ ಭ್ರಷ್ಟ ಸರ್ಕಾರ ತೆಗೆಯಬೇಕು ಎಂಬುದು ನನ್ನ ಅಜೆಂಡಾ ಎಂದರು.

ವಂದೇ ಮಾತಾರಂ ವಿರೋಧಿಸುವವರು ಬೀದಿಯಲ್ಲಿ ಮಲಗಿದ್ದಿರಲ್ಲ?: ವಂದೇ ಮಾತರಂಗೆ ಕೆಲವು ಮೌಲ್ವಿಗಳ ವಿರೋಧ ವಿಚಾರವಾಗಿ ಪ್ರತಿಕ್ರಿಯಿಸಿ, ದೇಶದಲ್ಲಿ ಈ ರೀತಿಯ ಘಟನೆಯಾದಾಗ ಗೊಂದಲ ಸೃಷ್ಟಿಸಲು ಶಕ್ತಿ ಇದೆ. ವಂದೇ ಮಾತರಂನಿಂದ ಯಾರಿಗೆ ತೊಂದರೆ ಇದೆ. ವಂದೇ ಮಾತರಂ ಮಾಡಿದ ತಕ್ಷಣ ಏನು ತೊಂದರೆ ನಿಮಗೆ.?. ಇದರಿಂದ ನಿಮಗೆ ಅವಮಾನನಾ.?. ಇಂತಹ ವಿಷಯಗಳನ್ನು ಹೊರತುಪಡಿಸಿ, ರಾಜ್ಯದಲ್ಲಿ ಲೂಟಿ ಆಗ್ತಿದೆ. ಆ ಲೂಟಿ ಸರಿ ಪಡಿಸೋದು ನೋಡಿಕೊಳ್ಳಬೇಕು. ಥಣಿಸಂದ್ರ, ಕೋಗಿಲುನಲ್ಲಿ ಏನೋ ನಡೆಯುತ್ತಿತ್ತು. ಮನೆ ಕೊಡ್ತಿವಿ ಅಂದ್ರು, ಎಷ್ಟು ತಿಂಗಳಾಯಿತು ಯಾರಿಗೆ ಕೊಟ್ಟಿದ್ದಾರೆ ಮನೆ?. ಇದನ್ನು ನೋಡಿಕೊಳ್ಳಿ. ವಂದೇ ಮಾತರಂಗೆ ಗೌರವ ಕೊಡುವವರು ಕೊಡ್ತಾರೆ. ವಂದೇ ಮಾತರಂಗೆ ವಿರೋಧ ಮಾಡುವವರು ಬೀದಿಯಲ್ಲಿ ಮಲಗಿದ್ದಾರಲ್ಲ ಎಂದು ಪ್ರಶ್ನಿಸಿದರು.

ಕಾಂಗ್ರೆಸ್ ಪಕ್ಷಕ್ಕೆ ಮತ ಹಾಕಿರೋದಕ್ಕೆ ಗ್ಯಾರಂಟಿ ಇಲ್ಲ: ರಾಜ್ಯ ಸರ್ಕಾರದ ಸಾವಿರ ದಿನಗಳ ಸಂಭ್ರಮಾಚರಣೆ ವಿಚಾರವಾಗಿ ಮಾತನಾಡಿ, ಇವತ್ತಿನ ಕಾಂಗ್ರೆಸ್ ಸರ್ಕಾರ ಆಡಳಿತ ನಡೆಸೋದಕ್ಕೆ ಪ್ರಾರಂಭ ಮಾಡಿ ಸಾವಿರ ದಿನಗಳನ್ನ ಪೂರೈಸಿದೆ. ಕಳೆದ ಎರಡೂವರೆ ವರ್ಷದಲ್ಲಿ ಪೌತಿಖಾತೆ, ಪೋಡಿ ಎಷ್ಟರ ಮಟ್ಟಿಗೆ ಆಗಿದೆ ಅನ್ನೋದು ಗೊತ್ತಿದೆ. ಯಾವ ಹಕ್ಕು ಪತ್ರ ಯಾರಿಗೆ ಕೊಟ್ಟಿದ್ದಾರೆ. ಗುರುತಿಸಿರೋದು ಯಾರು?. ಜನರಿಗೆ ಭೂಮಿ ಕೊಡುವುದು ಆರನೇ ಗ್ಯಾರಂಟಿ. ಸರ್ಕಾರದಲ್ಲಿರುವ ಮಂತ್ರಿಗಳಿಗೆ ಭೂ ಗ್ಯಾರಂಟಿ. ಕಾಂಗ್ರೆಸ್ ಪಕ್ಷಕ್ಕೆ ಮತ ಹಾಕಿರೋದಕ್ಕೆ ಗ್ಯಾರಂಟಿ ಇಲ್ಲ ಎಂದು ಆರೋಪಿಸಿದರು.

ಕಾಂಗ್ರೆಸ್ ಶಾಸಕರು ವಿದೇಶಿ ಪ್ರವಾಸ, ರೆಸಾರ್ಟ್‌ಗೆ ಶಿಫ್ಟ್ ಆಗುವ ವಿಚಾರವಾಗಿ ಪ್ರತಿಕ್ರಿಯಿಸುತ್ತಾ, ಎಲ್ಲಾದರೂ ಹೋಗಲಿ, ನನಗೆ ಬೇಕಾಗಿರೋದು ನಾಡಿನ ಹಲವಾರು ಸಮಸ್ಯೆಗಳಿಗೆ ಪರಿಹಾರ. ಅದರ ಕಡೆ ಗಮನ ಕೊಡಲಿ ಎಂದರು.

ಅಭಿವೃದ್ಧಿ ಪಥದಲ್ಲಿ ಸರ್ಕಾರ ಹೋಗ್ತಿದೆ. ವಿಪಕ್ಷಗಳಿಗೆ ಹೊಟ್ಟೆಕಿಚ್ಚಿದೆ ಎಂಬ ಆರೋಪ ವಿಚಾರವಾಗಿ ಮಾತನಾಡಿ, ನಾಡಿನ ಜನರ ಮೇಲೆ ಸಾಲ ಹೊರಿಸಿರೋದೆ ಇವರ ದೊಡ್ಡ ಅಭಿವೃದ್ಧಿ. 33 ಸಚಿವರು ಯಾರು ಸಾಲಗಾರರಾಗಿಲ್ಲ. ಸಂಪತ್ ಭರಿತವಾಗಿದ್ದಾರೆ. ಇದೇ ಇವರ ಸಾಧನೆ ಅನ್ನೋದು ನನ್ನ ಅಭಿಪ್ರಾಯ ಎಂದು ವಾಗ್ದಾಳಿ ನಡೆಸಿದರು.

ಸಿಂಧನೂರಿನಲ್ಲಿ ಪ್ರತ್ಯೇಕ ಕಳ್ಳತನ ಪ್ರಕರಣ: ಇಬ್ಬರು ಆರೋಪಿಗಳ ಬಂಧನ

ಸಿಂಧನೂರು,ಫೆ.14-

ಸಿಂಧನೂರು ಗ್ರಾಮೀಣ, ತುರ್ವಿಹಾಳ ಠಾಣೆ ಸೇರಿ ಸಿಂಧನೂರು ತಾಲೂಕಿನಲ್ಲಿ ನಡೆದ ಪ್ರತ್ಯೇಕ ಕಳ್ಳತನ ಪ್ರಕರಣಗಳಿಗೆ ಸಂಬಂಧಿಸಿದಂತೆ ಪೊಲೀಸರು ಇಬ್ಬರು ಆರೋಪಿಗಳನ್ನು ಬಂಧಿಸಿ, 3 ತೊಲೆ ಚಿನ್ನ, 15 ತೊಲೆ ಬೆಳ್ಳಿ ಹಾಗೂ ಬೈಕ್ ಜಪ್ತಿ ಮಾಡಿದ್ದಾರೆ.

ಸಿಂಧನೂರು ಗ್ರಾಮೀಣ ಠಾಣೆಯಲ್ಲಿ ನಡೆದ ಕಳ್ಳತನ ಪ್ರಕರಣಕ್ಕೆ ಸಂಬಂಧಿಸಿ ಆರೋಪಿ ಜಿಲಾನಿಯನ್ನು ವಶಕ್ಕೆ ಪಡೆದ ಪೊಲೀಸರು, ಚಿನ್ನ, ಬೈಕ್ ಸೇರಿ ಒಟ್ಟು ರೂ.1.50 ಲಕ್ಷ ಬೆಲೆಬಾಳುವ ವಸ್ತುಗಳನ್ನು ಜಪ್ತಿ ಮಾಡಿಕೊಂಡಿದ್ದಾರೆ.

ತುರ್ವಿಹಾಳ ಪೊಲೀಸ್ ಠಾಣೆಯಲ್ಲಿ ದಾಖಲಾದ ಕಳ್ಳತನ ಪ್ರಕರಣಕ್ಕೆ ಸಂಬಂಧಿಸಿದಂತೆ ಮಸ್ಕಿ ತಾಲೂಕಿನ ಸುಂಕನೂರು ಗ್ರಾಮದ ಶಿವರಾಜ ಹನುಮಮ್ಮ ಎಂಬ ಆರೋಪಿಯನ್ನು ಬಂಧಿಸಿ ಚಿನ್ನ, ಬೆಳ್ಳಿಯ ಆಭರಣ ಸೇರಿ ಒಟ್ಟು 2.50 ಲಕ್ಷ ಬೆಲೆ ಬಾಳುವ ವಸ್ತುಗಳನ್ನು ಜಪ್ತಿ ಮಾಡಿ ಆರೋಪಿಯನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ.

ವಾತ್ಸಲ್ಯ ಯೋಜನೆಯಲ್ಲಿ 3 ನೇ ಮನೆ ಹಸ್ತಾಂತರ

ಶ್ರೀಕ್ಷೇತ್ರ ಸಮಾಜ ಮುಖಿ ಕೆಲಸ ಮಾಡುತ್ತಿದೆ - ಎ ಚಂದ್ರಶೇಖರ



ಸಿರವಾರ,ಫೆ.14-

ಸಾಮಾಜಿಕ, ಆರ್ಥಿಕ, ಶೈಕ್ಷಣಿಕ, ಇನೂ ಅನೇಕ ರಂಗಗಳಿಗೆ ಅನುದಾನ ನೀಡುವ ಮೂಲಕ ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಶ್ರಮಿಸುತ್ತಿದೆ, ತಾಲೂಕಿನ ವ್ಯಾಪ್ತಿಯಲ್ಲಿ 3 ನೇ ಮನೆ ನಿರ್ಮಿಸಿ ಹಸ್ತಾಂತರ ಮಾಡಲಾಗಿದೆ ಎಂದು ಕೊಪ್ಪಳ ಪ್ರಾದೇಶಿಕ ವಿಭಾಗದ ಪ್ರಾದೇಶಿಕ ನಿರ್ದೇಶಕರಾದ ಶ್ರೀ ಎ ಚಂದ್ರಶೇಖರ ಹೇಳಿದರು. ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ವಾತ್ಸಲ್ಯ ಕಾರ್ಯಕ್ರಮದಡಿಯಲ್ಲಿ ಸಿರವಾರ ಪಟ್ಟಣದ ವಾ. ನಂ. 06 ರ ವಿಜಯನಗರ ಕಾಲೋನಿ ನಿವಾಸಿ ಬಸಮ್ಮನವರಿಗೆ ಮಂಜೂರಾದ 135000/- ಮೊತ್ತದ ಕಾಮಗಾರಿ ಪೂರ್ಣಗೊಂಡ ವಾತ್ಸಲ್ಯ ಮನೆಯನ್ನು ಯೋಜನೆಯ ಅವರು ಪಲಾನುಭವಿ ಬಸಮ್ಮ ಅವರಿಗೆ ಹಸ್ತಾಂತರ ಮಾಡಿ ಮಾತನಾಡಿದ ಅವರು ಮಾತೃಶ್ರೀ ಹೇಮಾವತಿ ಹೆಗ್ಗಡೆಯವರ ಕಾಳಜಿಯಲ್ಲಿ

3ನೇ ಪುಟಕ್ಕೆ



ಹಟ್ಟಿ-ಸಿರವಾರ ರಸ್ತೆಯಲ್ಲಿ ಟ್ರ್ಯಾಕ್ಟರ್ ಟ್ರಾಲಿ ಪಲ್ಟಿ

ಸಿರವಾರ,ಫೆ.14- ತಾಲೂಕಿನ ನವಲಕಲ್ ಸಮೀಪದ ಹಟ್ಟಿ ರಸ್ತೆ ಬಳಿಯ ಜಮೀನಿನಲ್ಲಿ ಜೋಳದ ಕಣಕಿ ತುಂಬಿದ್ದ ಟ್ರ್ಯಾಕ್ಟರ್ ಟ್ರಾಲಿ ಪಲ್ಟಿಯಾದ ಘಟನೆ ನಡೆದಿದೆ.

ನವಲಕಲ್ಲಿನಿಂದ ಹಟ್ಟಿಗೆ ತೆರಳುವ ರಸ್ತೆ ಕಿರಿದಾಗಿದ್ದು, ಟ್ರ್ಯಾಕ್ಟರ್‌ನ ಹಿಂದೆ ಬಸ್ ಬಂದ ಸಂದರ್ಭದಲ್ಲಿ ದಾರಿ ಮಾಡಿಕೊಡುವಾಗ ಟ್ರ್ಯಾಕ್ಟರ್ ಪಕ್ಕದ ಜಮೀನಿಗೆ ಪಲ್ಟಿಯಾಗಿದೆ.

ಘಟನೆಯಲ್ಲಿ ಚಾಲಕ ಸೇರಿದಂತೆ ಟ್ರ್ಯಾಕ್ಟರ್‌ನಲ್ಲಿದ್ದ ಮೂವರು ಪ್ರಾಣಾಪಾಯದಿಂದ ಪಾರಾಗಿದ್ದಾರೆ ಎಂದು ತಿಳಿದು ಬಂದಿದೆ.

ಪುಲ್ವಾಮ ದಾಳಿ ಹುತಾತ್ಮ ಯೋಧರಿಗೆ ನಮನ

ರಾಯಚೂರು,ಫೆ.14-

ಜಮ್ಮು ಮತ್ತು ಕಾಶ್ಮೀರದ ಪುಲ್ವಾಮದಲ್ಲಿ 2019ರಲ್ಲಿ ಭಾರತೀಯ ಸೇನೆಯ ಯೋಧರಿದ್ದ ವಾಹನದ ಮೇಲೆ ನಡೆದ ಆತ್ಮಾಹುತಿ ಬಾಂಬ್ ದಾಳಿಯಲ್ಲಿ ಹುತಾತ್ಮರಾದ 40 ವೀರ ಯೋಧರಿಗೆ ಕೇಂದ್ರೀಯ ಸಶಸ್ತ್ರ ಪೊಲೀಸ್ ಪಡೆಗಳ ಮಾಜಿ ಯೋಧರ ಕ್ಷೇಮಾಭಿವೃದ್ಧಿ ಸಂಘ (ರಿ) ರಾಯಚೂರು ವತಿಯಿಂದ ಮೆರವಣಿಗೆ ನಡೆಸಿ ಗೌರವ ನಮನ ಸಲ್ಲಿಸಲಾಯಿತು.

ನಗರದ ಬಸವೇಶ್ವರ ಚೌಕದಿಂದ ಆರಂಭವಾದ ಮೆರವಣಿಗೆ ಅಂಬೇಡ್ಕರ್ ವೃತ್ತ ಮೂಲಕ ಗಾಂಧಿ ಪ್ರತಿಮೆಯವರೆಗೆ ಸಾಗಿತು. ದೇಶಕ್ಕಾಗಿ ಪ್ರಾಣತ್ಯಾಗ ಮಾಡಿದ



ವೀರ ಯೋಧರನ್ನು ನೆನೆದು ಭಾಗವಹಿಸಿದವರು ದೇಶಭಕ್ತಿ ಘೋಷಣೆಗಳನ್ನು ಕೂಗಿದರು. ಮೆರವಣಿಗೆಯಲ್ಲಿ ಮಾಜಿ ಯೋಧರು ಹಾಗೂ ಸಾರ್ವಜನಿಕರು ರಾಷ್ಟ್ರಧ್ವಜಗಳನ್ನು ಹಾರಿಸಿ ದೇಶಪ್ರೇಮ ವ್ಯಕ್ತಪಡಿಸಿದರು. ಬಳಿಕ ಗಾಂಧಿ ಪ್ರತಿಮೆಯ ಎದುರು ಕ್ಯಾಂಡಲ್ ಹಚ್ಚಿ ಹುತಾತ್ಮ ಯೋಧರ ಸ್ಮರಣಾರ್ಥ ಮೌನ ಪ್ರಾರ್ಥನೆ ಸಲ್ಲಿಸಿ ಗೌರವ ನಮನ ಸಲ್ಲಿಸಿದರು.

ಈ ವೇಳೆ ಸಂಘದ ಪದಾಧಿಕಾರಿಗಳು ಮಾತನಾಡಿ, ದೇಶದ ಗಡಿಗಳಲ್ಲಿ ಜೀವಪಣವಾಗಿ ಹೋರಾಡಿದ ಯೋಧರ ತ್ಯಾಗವನ್ನು ಸದಾ ಸ್ಮರಿಸಬೇಕು. ''ನಮ್ಮ ಯೋಧರು ನಮ್ಮ ಹೆಮ್ಮೆ'' ಎಂಬ ಸಂದೇಶವನ್ನು ಸಮಾಜದ ಪ್ರತಿಯೊಬ್ಬರಿಗೂ ತಲುಪಿಸುವುದು ನಮ್ಮ ಕರ್ತವ್ಯ ಎಂದು ಹೇಳಿದರು. ''ದೇಶದ ಧ್ವಜವು ಗಾಳಿಯಿಂದ ಅಲ್ಲ, ಯೋಧರ ಉಸಿರಿನಿಂದ ಹಾರುತ್ತಿದೆ'' ಎಂಬ ಮಾತುಗಳನ್ನು ಉಲ್ಲೇಖಿಸಿ ವೀರ ಯೋಧರ ತ್ಯಾಗವನ್ನು ಕೊಂಡಾಡಿದರು.

ಕಾರ್ಯಕ್ರಮದಲ್ಲಿ ಕೇಂದ್ರೀಯ ಸಶಸ್ತ್ರ ಪೊಲೀಸ್ ಪಡೆಗಳ ಮಾಜಿ ಯೋಧರ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಕೃಷ್ಣಮೂರ್ತಿ, ಗೌರವಾಧ್ಯಕ್ಷ ಎಸ್. ಮಲ್ಲಯ್ಯ, ಅಖಿಲ ಕರ್ನಾಟಕ ಮಾಜಿ ಸೈನಿಕರ ಸಂಘದ ಅಧ್ಯಕ್ಷ ಚನ್ನಾರೆಡ್ಡಿ, ಬಸವರಾಜ್ ನಾಯಕ್, ಸಲೀಂ ಹುಸೇನ್, ರಶೀದ್ ಬೇಗ್, ಶರಣಬಸವ, ಅಲೀಂ ಮಲಬಾರ್, ಹನುಮಂತ್ ನಸಲಾಪುರ್, ಜಂಗ್ಲಪ್ಪ, ಓಬಳೇಶ್, ಸೈಯದ್ ಅಹ್ಮದ್, ತಿಪ್ಪಣ್ಣ ರಂಗನಗೌಡ, ತಿಪ್ಪಣ್ಣ, ನರಸಿಂಲು, ಆರ್. ತಿಮ್ಮಯ್ಯ, ಅಬ್ದುಲ್ ಖಾದರ್ ಸೇರಿದಂತೆ ಅನೇಕ ಮಾಜಿ ಯೋಧರು, ಸಂಘದ ಸದಸ್ಯರು, ಯುವಕರು ಹಾಗೂ ಸಾರ್ವಜನಿಕರು ಭಾಗವಹಿಸಿದ್ದರು.

ಶಾಂತಿಯುತವಾಗಿ ನಡೆದ ಈ ಶ್ರದ್ಧಾಂಜಲಿ ಕಾರ್ಯಕ್ರಮ ದೇಶಭಕ್ತಿ ಮತ್ತು ಕೃತಜ್ಞತೆಯ ಭಾವನೆಗಳನ್ನು ಮೆರೆಯಿತು.

ಆದಿ ಜಾಂಬವ ನಿಗಮದ ಅಧ್ಯಕ್ಷ ಮಂಜುನಾಥ ಸಿರವಾರಕ್ಕೆ ಭೇಟಿ.

ಯುವ ಜನತೆ ಸ್ವಾವಲಂಬಿಗಳಾಗಬೇಕು - ಮಂಜುನಾಥ

ಸಿರವಾರ,ಫೆ.14-

ವಿದ್ಯಾವಂತ ಯುವ ಜನತೆ ಸರ್ಕಾರಿ ಕೆಲಸ ಎಂದು ಖಾಲಿ ಇರದೆ, ಸ್ವಯಂ ಉದ್ಯೋಗ ಮಾಡುವ ಮೂಲಕ ಸ್ವಾವಲಂಭಿಗಳಾಗಬೇಕು, ಶಿಕ್ಷಣ ವಂಚಿತರಿಗೆ ಶಿಕ್ಷಕಣವನ್ನು ಕೊಡಿಸುವ ಮೂಲಕ ಸಮಾಜವನ್ನು ಮುನ್ನಡಿಸಿಕೊಂಡು ಹೋಗಬೇಕು ಎಂದು

ರಾಜ್ಯ ಸರ್ಕಾರದ ಆದಿ ಜಾಂಬವ ಅಭಿವೃದ್ಧಿ ನಿಗಮದ ರಾಜ್ಯಾಧ್ಯಕ್ಷರಾದ ಜಿ.ಎಸ್. ಮಂಜುನಾಥ ಹೇಳಿದರು. ಸಿರವಾರ ಪಟ್ಟಣದಲ್ಲಿರುವ ಪ್ರವಾಸಿ ಮಂದಿರಕ್ಕೆ ಆಗಮಿಸಿದ ಅವರನ್ನು ಮಾದಿಗ ಸಮಾಜದ ಮುಖಂಡರು ಸ್ವಾಗತಿಸಿ ಸನ್ಮಾನಿಸಿದರು.



ನಂತರ ಮಾತನಾಡಿದ ಅವರು ನಮ್ಮ ಸಮಾಜದ ಜನರು, ಯುವಕರು ಜಾಗೃತರಾಗಬೇಕು, ಉನ್ನತ ಮಟ್ಟದ ಶಿಕ್ಷಣ ಪಡೆಯಬೇಕು ನೌಕರ ಸಿಗದಿದ್ದರೆ ಕೃಷಿ ಹಾಗೂ ದುಡಿಮೆ ಮಾಡಬೇಕು, ಎಲ್ಲಾ ಜಾತಿ ಜನಾಂಗದ ಜೊತೆ ಅನ್ಯೋನ್ಯವಾಗಿ ಬಾಳಬೇಕು. ಜಗಳ, ಜೂಟಿ ಬಿಟ್ಟು, ಮುಂಬರುವ ಸ್ಥಳೀಯ, ತಾ.ಪಂ. ಜಿ.ಪಂ, ಗ್ರಾ.ಪಂ. ಚುನಾವಣೆಯಲ್ಲಿ ಒಗ್ಗಟ್ಟಾಗಿ ಸಮಾಜದಿಂದ ಆಯ್ಕೆ ಮಾಡಬೇಕು, ಒಗ್ಗಟ್ಟು ಇಲ್ಲದ ಕಾರಣ ಈ ಭಾಗದಲ್ಲಿ ನಮ್ಮ ಸಮಾಜದವರು ಶಾಸಕರಾಗಿಲ್ಲ, ಸರ್ಕಾರ ಒಳ ಮೀಸಲಾತಿ ಜಾರಿ ಮಾಡುತ್ತಿದೆ. ಅದು ಮುಂದಿನ ನಮ್ಮ

3ನೇ ಪುಟಕ್ಕೆ

ಸಿರವಾರ ರಾಯಚೂರು ಜಿಲ್ಲೆಯಲ್ಲಿ ಉಳಿಯಲಿ ತುಂಗಭದ್ರಾ ನದಿ ಕುರಿತು 2 ದಿನ ಕಾರ್ಯಾಗಾರ ಪಾಲ್ಗೊಳಲು ಎನ್.ಉದಯಕುಮಾರ ಕರೆ



ಸಿರವಾರ,ಫೆ.14-

ನಿರ್ಮಲಾ ತುಂಗಭದ್ರ ಅಭಿಯಾನದ ಭಾಗವಾಗಿ ಫೆ 28 ಮತ್ತು ಮಾರ್ಚ 01 ಎರಡು ದಿನಗಳ ಕಾರ್ಯಾಗಾರವನ್ನು ಶಿವಮೊಗದಲ್ಲಿ ಹಮ್ಮಿಕೊಳಲಾಗಿದ್ದೂ, ಹೆಚ್ಚಿನ ಸಂಖ್ಯೆಯಲ್ಲಿ ಸ್ವಯಂ ಪ್ರೇರಿತರಾಗಿ ಭಾಗವಹಿಸಿ ಎಂದು ನಿರ್ಮಲ ತುಂಗಭದ್ರ ಅಭಿಯಾನದ ಜಿಲ್ಲಾ ಸಂಚಾಲಕ ಎನ್ ಉದಯಕುಮಾರ ಸಾಹುಕಾರ ಹೇಳಿದರು.

ಪಟ್ಟಣದ ಅವರ ನಿವಾಸದಲ್ಲಿ ಮಾತನಾಡಿದ ಅವರು ಸಿಂಧನೂರು ತಾಲೂಕನ್ನು ಜಿಲ್ಲೆಯಾಗಿ ಘೋಷಣೆ ಮಾಡುವಂತೆ ಅನೇಕರ ಒತ್ತಾಯ ಮಾಡುತ್ತಿರುವುದು ಸ್ವಾಗತ, ಆದರೆ ಸಿಂಧನೂರು ಜಿಲ್ಲೆಗೆ ಸಿರವಾರ ತಾಲೂಕ ಸೇರ್ಪಡೆಗೆ ನಮ್ಮ ವಿರೋಧವಿದೆ. ಸಿರವಾರಕ್ಕೆ ರಾಯಚೂರು ಜಿಲ್ಲಾ ಕೇಂದ್ರವು 35 ಕಿ.ಮಿ ಅಂತರದಲ್ಲಿದೆ. ಕಳೆದ 10 ವರ್ಷಗಳ ಹಿಂದೇ ತಾಲೂಕ ಕೇಂದ್ರವಾಗಿ ಘೋಷಣೆಯಾಗಿದೆ. ಇನೂ ಅನೇಕ ಕಛೇರಿಗಳು ಮಾನ್ವಿಯಲ್ಲಿ ಕಾರ್ಯ ನಿರ್ವಹಿಸು ತ್ತಿವೆ. ಅಷ್ಟರಲ್ಲಿ ಸಿರವಾರ ಸಿಂಧನೂರು ಜಿಲ್ಲೆಗೆ ಸೇರ್ಪಡೆ ಮಾಡುವುದು ಎಷ್ಟು ಸರಿ. ಭೌಗೋಳಿಕವಾಗಿ ನೋಡಿದರೆ ಸಿಂಧನೂರರು 100 ಕಿ.ಮಿ ಆಗುತ್ತದೆ ಸಾರ್ವಜನಿಕರಿಗೆ ತೊಂದರೆಯಾಗುತ್ತದೆ. ಸಿಂಧನೂರ ಜಿಲ್ಲೆಯಾದರೆ ಸಿರವಾರ ಮತ್ತೆ ಸಭಿವೃದ್ದಿಯಲ್ಲಿ ಹಿಂದೆ ಬಿಳುವುದರಲ್ಲಿ ಅನುಮಾನವೇ ಇಲ್ಲಾ. ಒಂದು ವೇಳೆ ಘೋಷಣೆಗೆ ಮುಂದಾದರೆ. ಉಗ್ರ ಹೊರಾಟ ಮಾಡಲಾಗುವುದು ಎಂದರು.

ನಿರ್ಮಲ ತುಂಗಭದ್ರ ಅಭಿಯಾನ ಭಾಗವಾಗಿ ಪಾಸಯಾತ್ರೆಯ ಮೂಲಕ ತೆರಳಿ ಜಾಗೃತಿ ಮೂಡಿಸಲಾಯಿತು. ನಂತರ ನದಿಗೆ ಪ್ಲಾಸ್ಟಿಕ್ ಎಸೆಯದಂತೆ ಶಾಂಪು, ಸೋಪು ಬಳಕೆ ಮಾಡದಂತೆ ಜಾಗೃತಿ ಮೂಡಿಸಲಾಗಿದೆ. ಅದರ ಮುಂದುವರೆದು ಫೇ 28- ಮಾರ್ಚ 01 ರಂದು ಶಿವಮೋಗದಲ್ಲಿ ಎರಡು ದಿನದ ಕಾರ್ಯಾಗಾರ ಇದೆ. ಈ

3ನೇ ಪುಟಕ್ಕೆ

ದಶಕಗಳ ಕನಸು ಸಾಕಾರಗೊಳ್ಳುವತ್ತ ಗಾಯತ್ರಿ ಭವನ ಮೇಲ್ಛಾವಣಿ ಪೂರ್ಣ

ಉಳಿದ ಕಾಮಗಾರಿ ಶೀಘ್ರ ಮುಗಿಸಲು ಸಮಾಜದ ಒಗ್ಗಟ್ಟು ಅಗತ್ಯ

ರಾಯಚೂರು,ಫೆ.14-

ಬ್ರಾಹ್ಮಣ ಮಹಾಸಭೆಯ ಬಹುಕಾಲದ ಮಹತ್ವಾಕಾಂಕ್ಷೆಯಾದ ಗಾಯತ್ರಿ ಭವನ ನಿರ್ಮಾಣ ಕಾರ್ಯ ಮತ್ತೊಂದು ಮಹತ್ವದ ಹಂತ ತಲುಪಿದ್ದು, ಭವನದ ಮೇಲ್ಛಾವಣಿ ಕಾಮಗಾರಿ ಇಂದು ಯಶಸ್ವಿಯಾಗಿ ಪೂರ್ಣಗೊಂಡಿದೆ. ಈ ಹಿನ್ನೆಲೆ ಜಿಲ್ಲಾ ಬ್ರಾಹ್ಮಣ ಸಮಾಜದ ವತಿಯಿಂದ ಸಂತೋಷ ವ್ಯಕ್ತವಾಗಿದ್ದು, ದಶಕಗಳ ಕನಸು ಸಾಕಾರಗೊಳ್ಳುವತ್ತ ದಾಪುಗಾಲು ಇಟ್ಟಿದೆ ಎಂದು ಅಭಿಪ್ರಾಯ ಪಟ್ಟಿದ್ದಾರೆ.

ವಿಧಾನಪರಿಷತ್ ಸದಸ್ಯರ ಅನುದಾನದಲ್ಲಿ ಭವನ ನಿರ್ಮಾಣ ವಾಗುತ್ತಿದ್ದು, ಜಿಲ್ಲಾ ಪ್ರತಿನಿಧಿ



ರಮೇಶ್ ಕುಲಕರ್ಣಿ ಅವರ ಮಾರ್ಗದರ್ಶನದಲ್ಲಿ ಕಾರ್ಯಗಳು ವೇಗವಾಗಿ ಸಾಗುತ್ತಿವೆ. ರಾಯಚೂರು ಜಿಲ್ಲಾ ಬ್ರಾಹ್ಮಣ ಸಮಾಜದ ಸಂಚಾಲಕರು, ಕಾರ್ಯಾಧ್ಯಕ್ಷರು, ರಾಜ್ಯ ಕಾರ್ಯಕಾರಿಣಿ ಸದಸ್ಯರು ಸೇರಿದಂತೆ ಎಲ್ಲ ಪದಾಧಿಕಾರಿಗಳು, ಸಮಾಜದ ಹಿರಿಯರು ಹಾಗೂ ಯುವಕರು ಉತ್ಸಾಹದಿಂದ ನಿರ್ಮಾಣ ಕಾರ್ಯದಲ್ಲಿ ತೊಡಗಿಸಿಕೊಂಡು ತಮ್ಮದೇ ಆದ ಸೇವೆ ಸಲ್ಲಿಸುತ್ತಿದ್ದಾರೆ.

ಈ ಮಹತ್ವದ ಕಾರ್ಯ ಶೀಘ್ರ ಪೂರ್ಣಗೊಳ್ಳಲು ಸಮಾಜದ ಎಲ್ಲ ವರ್ಗಗಳ ಸಹಕಾರ ಮತ್ತು ಪ್ರೋತ್ಸಾಹ ಅಗತ್ಯವಾಗಿದ್ದು, ಇದೇ ರೀತಿಯ ಒಗ್ಗಟ್ಟು ಮುಂದುವರಿಯಲಿ ಎಂದು ಮನವಿ ಮಾಡಲಾಗಿದೆ. ಗಾಯತ್ರಿ ಭವನ ಪೂರ್ಣಗೊಂಡ ಬಳಿಕ ಸಮಾಜದ ಧಾರ್ಮಿಕ, ಸಾಂಸ್ಕೃತಿಕ ಮತ್ತು ಸಾಮಾಜಿಕ ಚಟುವಟಿಕೆಗಳಿಗೆ ಇದು ಪ್ರಮುಖ ಕೇಂದ್ರವಾಗಲಿದೆ ಎಂಬ ವಿಶ್ವಾಸ ವ್ಯಕ್ತವಾಗಿದೆ.

ಅನ್ನದಾಸೋಹ ಭವನಕ್ಕೆ ಅಡಿಗಲ್ಲು: ದೇವಲ ಗಾಣಗಾಪೂರ ಅಭಿವೃದ್ಧಿಗೆ ಬದ್ದ -ರಾಮಲಿಂಗಾರೆಡ್ಡಿ

ಕಲಬುರಗಿ,ಫೆ.14-

ಶ್ರೀ ದತ್ತಾತ್ರೇಯನ ಸುಕ್ಷೇತ್ರವಾದ ದೇವಲ ಗಾಣಗಾಪೂರ ಸಮಗ್ರ ಅಭಿವೃದ್ಧಿಗೆ ನಮ್ಮ ಸರ್ಕಾರ ಬದ್ಧವಾಗಿದ್ದು, ತಮ್ಮ ಅವಧಿಯಲ್ಲಿ ಕ್ಷೇತ್ರದ ಅಭಿವೃದ್ಧಿ ಕಾರ್ಯಗಳಿಗೆ ಚಾಲನೆ ನೀಡುವುದಾಗಿ ಸಾರಿಗೆ ಮತ್ತು ಮುಜರಾಯಿ ಸಚಿವ ರಾಮಲಿಂಗಾರೆಡ್ಡಿ ಹೇಳಿದರು.

ಶುಕ್ರವಾರ ಅಫಜಲಪೂರ ತಾಲೂಕಿನ ದೇವಲ ಗಾಣಗಾಪೂರದ ಶ್ರೀ ದೇವಸ್ಥಾನ ಅಡಿಯಲ್ಲಿ ಬರುವ ಶ್ರೀ ತಂತುಕೇಶ್ವರ ದೇವಸ್ಥಾನದ ಅನ್ನದಾಸೋಹ ಭವನಕ್ಕೆ ಅಡಿಗಲ್ಲು ನೆರವೇರಿಸಿ ಮಾತನಾಡಿದ ಅವರು, ದೇವಸ್ಥಾನದ ಭಕ್ತರುಗಳಾದ ವಿಜಯವಾಡ ಮೂಲದ ಶ್ರೀನಿವಾಸ ಮತ್ತು ಸುಕುಮಾರಿ ಕೊನೇರು ದಂಪತಿಗಳು ಅಂದಾಜು 2 ಕೋಟಿ ರೂ. ವೆಚ್ಚದಲ್ಲಿ ಅನ್ನದಾಸೋಹ ಭವನಕ್ಕೆ ನಿರ್ಮಿಸಲು ಮುಂದೆ ಬಂದಿರುವುದು ಸಂತೋಷದ ವಿಷಯ. ಹಣ ಎಲ್ಲರ ಬಳಿ ಇದೆ ಆದರೆ ದಾನ ಮಾಡುವ ಮನಸ್ಸು ಬೇಕಲ್ಲವೆ. ಇದಕ್ಕಾಗಿ ದಂಪತಿಗೆ ವಿಶೇಷ ಅಭಿನಂದನೆ ಸಲ್ಲಿಸುವೆ ಎಂದರು.

ಗಾಣಗಾಪೂರ ದೇವಸ್ಥಾನ ಕ್ಷೇತ್ರದ ಅಭಿವೃದ್ಧಿಗೆ ಈಗಾಗಲೆ ಕೇಂದ್ರ ಸರ್ಕಾರಕ್ಕೆ ಪ್ರಸಾದ ಯೋಜನೆಯಡಿ 83.52 ಕೋಟಿ ರೂ. ಮೊತ್ತದ ಕ್ರಿಯಾ ಯೋಜನೆಯ ಪ್ರಸ್ತಾವನೆ ಸಲ್ಲಿಸಲಾಗಿತ್ತಾದರು, ಕೇಂದ್ರ ಸರ್ಕಾರ ಅದನ್ನು ಪರಿಗಣಿಸಿಲ್ಲ. ಹೀಗಾಗಿ ಇಲ್ಲಿನ ಜಿಲ್ಲಾ ಉಸ್ತುವಾರಿ ಸಚಿವರು ಹಾಗೂ ಜಿಲೆಯ ಶಾಸಕರೊಂದಿಗೆ ಚರ್ಚಿಸಿ ಲಕ್ಷಾಂತರ ಭಕ್ತರನ್ನು ಹೊಂದಿರುವ ಈ ದೇವಸ್ಥಾನದ ಅಭಿವೃದ್ಧಿಗೆ ತಾವು ಪ್ರಮಾಣಿಕ ಪ್ರಯತ್ನ ಮಾಡುವುದಾಗಿ ಅವರು ಭರವಸೆ ನೀಡಿದರು.

ರಸ್ತೆ, ಶೌಚಾಲಯ, ಕುಡಿಯುವ ನೀರು, ದಾಸೋಹ ಮನೆ, ಪಾರ್ಕಿಂಗ್, ಸ್ನಾನ್ ಘಾಟ್ ಹೀಗೆ ಒಟ್ಟು ಮೂರು ಹಂತದಲ್ಲಿ ಈ ಪ್ರದೇಶವನ್ನು



ಅಭಿವೃದ್ಧಿಪಡಿಸಲು ಈಗಾಗಲೆ ನೀಲಿ ನಕ್ಷೆ ಸಿದ್ದಪಡಿಸಲಾಗಿದೆ. ಇತ್ತೀಚೆಗೆ ಸಚಿವ ಪ್ರಿಯಾಂಕ್ ಖರ್ಗೆ ಅವರ ಜೊತೆ ಒಂದು ಸುತ್ತಿನ ಸಭೆ ಸಹ ನಡೆದಿದೆ. ಜಿಲ್ಲೆಯ ಸಚಿವರು ಮತ್ತು ಶಾಸಕರೊಂದಿಗೆ ಮತ್ತೊಮ್ಮೆ ಸಭೆ ಸೇರಿ ಮುಖ್ಯಮಂತ್ರಿಗಳ ಬಳಿ ಹೋಗಿ ಇದಕ್ಕಾಗಿ ಹೆಚ್ಚಿನ ಅನುದಾನ ನೀಡಲು ಕೋರಲಾಗುವುದು ಎಂದರು.

ಇದಕ್ಕು ಮುನ್ನ ಶಾಸಕ ಎಂ.ವೈ.ಪಾಟೀಲ್ ಮಾತನಾಡಿ, ದೇವಸ್ಥಾನಕ್ಕೆ ವರ್ಷಕ್ಕೆ ಒಂದು ಕೋಟಿಗೂ ಹೆಚ್ಚು ಭಕ್ತರು ದರ್ಶನಕ್ಕೆ ಬರುತ್ತಾರೆ. ಮೂಲಸೌಕರ್ಯ ಇಲ್ಲದಿರುವುದಕ್ಕೆ ಭಕ್ತರು ಶಾಪ ಹಾಕುತ್ತಿದ್ದಾರೆ. ಕೇಂದ್ರ ಸಚಿವ ನಿತಿನ್ ಗಡ್ಕರಿ, ಮಹಾರಾಷ್ಟ್ರ ಮುಖ್ಯಮಂತ್ರಿ ದೇವಿಂದ್ರ ಫಡನವೀಸ್ ಸೇರಿದಂತೆ ಅನೇಕ ಗಣ್ಯರು ದೇವಸ್ಥಾನಕ್ಕೆ ಬಂದು ಹೋಗಿದ್ದಾರೆ. ಆದರೆ ದೇವಸ್ಥಾನ ಅಭಿವೃದ್ಧಿ ಕಂಡಿಲ್ಲ. ಸರ್ಕಾರ ವಿಶೇಷ ಕಾಳಜಿ ವಹಿಸಿ ಪ್ರಸಾದ್ ಯೋಜನೆ ಅಡಿಯಲ್ಲಿ ಹೆಚ್ಚಿನ ಅನುದಾನ ಒದಗಿಸಿ ದೇವಸ್ಥಾನ ಅಭಿವೃದ್ಧಿ ಮಾಡಬೇಕು ಎಂದು ಸಚಿವರಲ್ಲಿ ಮನವಿ ಮಾಡಿಕೊಂಡರು.

ವಿಧಾನ ಪರಿಷತ್ ಶಾಸಕರಾದ ತಿಪ್ಪಣ್ಣಪ್ಪ ಕಮಕನೂರ, ಜಗದೇವ ಗುತ್ತೇದಾರ, ಕೆ.ಕೆ.ಆರ್.ಟಿ.ಸಿ ಅಧ್ಯಕ್ಷ ಅರುಣಕುಮಾರ ಪಾಟೀಲ, ಜಿಲ್ಲಾಧಿಕಾರಿ ಬಿ.ಫೌಜಿಯಾ ತರನ್ನುಮ್, ಕೆ.ಕೆ.ಆರ್.ಟಿ.ಸಿ ವ್ಯವಸ್ಥಾಪಕ ನಿರ್ದೇಶಕಿ ಡಾ.ಬಿ.ಸುಶೀಲಾ, ಅಪರ ಜಿಲ್ಲಾಧಿಕಾರಿ ರಾಯಪ್ಪ ಹುಣಸಗಿ, ತಹಶೀಲ್ದಾರ ಸಂಜೀವಕುಮಾರ ದಾಸರ್, ಸಹಾಯಕ ಆಯುಕ್ತೆ ಸಾಹಿತ್ಯ, ಗಾಣಗಾಪೂರ ದೇವಸ್ಥಾನದ ಕಾರ್ಯನಿರ್ವಾಹಕ ಅಧಿಕಾರಿ ಶಿವಕಾಂತಮ್ಮ ಸೇರಿದಂತೆ ಅನೇಕ ಅಧಿಕಾರಿಗಳು ಇದ್ದರು.

ನಂತರ ಅತಿಥಿಗೃಹದಲ್ಲಿ ಅಧಿಕಾರಿಗಳೊಂದಿಗೆ ಸಭೆ ನಡೆಸಿದ ಸಚಿವ ರಾಮಲಿಂಗಾರೆಡ್ಡಿ ಅವರು 102 ಕೋಟಿ ರೂ. ಮೊತ್ತದಲ್ಲಿ ಗಾಣಗಾಪೂರ ಮತ್ತು 40 ಕೋಟಿ ರೂ. ಮೊತ್ತದಲ್ಲಿ ಘತ್ತರಗಾ ದೇವಸ್ಥಾನ ಅಭಿವೃದ್ಧಿಪಡಿಸುವ ನಿಟ್ಟನಲ್ಲಿ ಕೂಲಂಕುಷವಾಗಿ ಚರ್ಚಿಸಿದರು.

ಕಾಶಿ ಮಾದರಿಯಲ್ಲಿ ಗಾಣಗಾಪೂರ ಅಭಿವೃದ್ಧಿಗೆ ಜಮೀನು ಭೂಸ್ವಾಧೀನ ಅಗತ್ಯವಿದೆ ಮತ್ತು ಘತ್ತರಗಾ ಅಭಿವೃದ್ಧಿಗೆ ಅನುದಾನ ಲಭ್ಯವಿದ್ದು, ಸರ್ಕಾರ ಮಂಜೂರಾತಿ ನೀಡಬೇಕಿದೆ ಎಂಡು ಡಿ.ಸಿ. ಬಿ.ಫೌಜಿಯಾ ತರನ್ನುಮ್ ನೀಲಿ ನಕ್ಷೆಯೊಂದಿಗೆ ಸಚಿವರ ಗಮನಕ್ಕೆ ತಂದಾಗ ಮುಂಬರುವ ಸೆಷನ್ ಸಂದರ್ಭದಲ್ಲಿ ಈ ಬಗ್ಗೆ ಬೆಂಗಳೂರಿನಲ್ಲಿ ಕಂದಾಯ ಇಲಾಖೆಯ ಅಧಿಕಾರಿಗಳೊಂದಿಗೆ ಸಭೆ ನಡೆಸಿ ಭೂಸ್ವಾಧೀನ ಕುರಿತು ನಿರ್ಧಾರ ತೆಗದುಕೊಳ್ಳೊಣ ಎಂದರು.

3 ತಿಂಗಳಲ್ಲಿ ಘತ್ತರಗಾ ಅಭಿವೃದ್ಧಿ ಕಾರ್ಯಕ್ಕೆ ಚಾಲನೆ: ಸಭೆಯ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಸಚಿವ ರಾಮಲಿಂಗಾರೆಡ್ಡಿ ಅವರು, ಅಫಜಲಪೂರ ತಾಲೂಕಿನ ಘತ್ತರಗಾದ ಶ್ರೀ ಭಾಗ್ಯವಂತಿ ದೇವಸ್ಥಾನದ ಸಮಗ್ರ ಅಭಿವೃದ್ಧಿಗೆ 40 ಕೋಟಿ ರೂ. ಮೊತ್ತದ ಪ್ರಸ್ತಾವನೆ ಜಿಲ್ಲಾಡಳಿತದಿಂದ ಬಂದಿದ್ದು, ಕೂಡಲೆ ಅದಕ್ಕೆ ಅನುಮೋದನೆ ನೀಡಿ ಮುಂದಿನ 3-4 ತಿಂಗಳಿನಲ್ಲಿ ಭಕ್ತಾದಿಗಳ ಅನುಕೂಲಕ್ಕಾಗಿ ಮೂಲಸೌಕರ್ಯ ಕೆಲಸಗಳಿಗೆ ಚಾಲನೆ ನೀಡಲಾಗುವುದು ಎಂದರು.

ಫೆ.20 ರಂದು ಸಂತಕವಿ ಶ್ರೀ ಸರ್ವಜ್ಞ ಜಯಂತಿ ಕಾರ್ಯಕ್ರಮ

ಬಳ್ಳಾರಿ,ಫೆ.14-

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಮಹಾನಗರ ಪಾಲಿಕೆ ಇವರ ಸಂಯುಕ್ತಾಶ್ರಯದಲ್ಲಿ ಫೆ.20 ರಂದು ಬೆಳಿಗ್ಗೆ 11 ಗಂಟೆಗೆ ನಗರದ ಸಾಂಸ್ಕೃತಿಕ ಸಮುಚ್ಚಯ ಹೊಂಗಿರಣ ಸಭಾಂಗಣದಲ್ಲಿ ಸಂತಕವಿ ಶ್ರೀ ಸರ್ವಜ್ಞ ಜಯಂತಿ ಕಾರ್ಯಕ್ರಮ ಆಯೋಜಿಸಲಾಗಿದೆ. ವಸತಿ, ವಕ್ಫ್ ಮತ್ತು ಅಲ್ಪಸಂ ಖ್ಯಾತರ ಕಲ್ಯಾಣ ಸಚಿವರು ಹಾಗೂ ಬಳ್ಳಾರಿ ಜಿಲ್ಲಾ ಉಸ್ತುವಾರಿ ಸಚಿವ ಬಿ.ಜೆಡ್.ಜಮೀರ್ ಅಹ್ಮದ್ ಖಾನ್ ಅವರು ಕಾರ್ಯಕ್ರಮ ಉದ್ಘಾಟಿ ಸುವರು. ಬಳ್ಳಾರಿ ನಗರ ಶಾಸಕ ನಾರಾ ಭರತ್ ರೆಡ್ಡಿ ಅವರು ಅಧ್ಯಕ್ಷತೆ ವಹಿಸುವರು.

ಮುಖ್ಯ ಅತಿಥಿಗಳಾಗಿ ಸಂಸದರಾದ ಈ.ತುಕರಾಮ್, ಕೆ.ರಾಜಶೇಖರ ಬಸವರಾಜ ಹಿಟ್ನಾಳ್, ರಾಜ್ಯ ಸಭೆ ಸಂಸದ ಡಾ.ಸೈಯದ್ ನಾಸೀರ್ ಹುಸೇನ್, ಕರ್ನಾಟಕ ರಾಜ್ಯ ಸಹಕಾರ ಕೈಮಗ್ಗ ನೇಕಾರ ಮಹಾಮಂಡಳಿ ನಿಯಮಿ ತ (ಕಾವೇರಿ ಹ್ಯಾಂಡ್‌ಲೂಮ್ಸ್)ದ ಅಧ್ಯಕ್ಷರೂ ಆಗ ಕಂಪ್ಲಿ ಶಾಸಕ ಜೆ.ಎನ್.ಗಣೇಶ್, ಡಾ.ಬಾಬು ಜಗಜೀವನ್‌ರಾಂ ಚರ್ಮ ಕೈಗಾರಿಕಾ ಅಭಿವೃದ್ಧಿ ನಿಗಮ ನಿಯಮಿತದ ಅಧ್ಯಕ್ಷ ಮುಂಡರಗಿ ನಾಗರಾಜ್, ಬಳ್ಳಾರಿ ಗ್ರಾಮೀಣ ಶಾಸಕ ಬಿ.ನಾಗೇಂದ್ರ, ಸಿರುಗುಪ್ಪ ಶಾಸಕ ಬಿ.ಎಂ ನಾಗರಾಜ್, ಸಂಡೂರು ಶಾಸಕಿ ಈ.ಅನ್ನಪೂರ್ಣ, ವಿಧಾನ ಪರಿಷತ್ ಶಾಸಕರಾದ ಡಾ.ಚಂದ್ರಶೇಖರ ಬಿ.ಪಾಟೀಲ, ಶಶೀಲ್ ಜಿ.ನಮೋಶಿ, ವೈ.ಎಂ.ಸತೀಶ್, ಮಹಾಗರ ಪಾಲಿಕೆ ಮಹಾಪೌರರಾದ ಪಿ.ಗಾದೆಪ್ಪ, ಬಳ್ಳಾರಿ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಜೆ.ಎಸ್. ಆಂಜನೇಯಲು, ಕರ್ನಾಟಕ ಸ್ಟೇಟ್ ಮಿನಿರಲ್ಸ್ ಕಾರ್ಪೋರೇಷನ್ ಲಿಮಿಟೆಡ್ ನ ಉಪಾಧ್ಯಕ್ಷ ಹೆಚ್.ಲಕ್ಷ್ಮಣ್, ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಕೆ.ಇ.ಚಿದಾನಂದಪ್ಪ ಸೇರಿದಂತೆ ಇತರರು ಭಾಗವಹಿಸುವರು.

ಕಾರ್ಯಕ್ರಮದಲ್ಲಿ ಬಳ್ಳಾರಿಯ ಎಂ.ನಾಗಭೂಷಣ ಬಾಪುರೆ ತಂಡದಿಂದ ಭಕ್ತಿ ಸಂಗೀತ ಕಾರ್ಯ ಕ್ರಮ ಇರಲಿದೆ. ಜಿಲ್ಲಾಧಿಕಾರಿ ನಾಗೇಂದ್ರ ಪ್ರಸಾದ್.ಕೆ., ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಸುಮನ್ ಡಿ.ಪೆನ್ನೇಕರ್, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮಹಮ್ಮದ್ ಹಾರೀಸ್ ಸುಮೇರ್, ಅಪರ ಜಿಲ್ಲಾಧಿಕಾರಿ ಮಹಮ್ಮದ್ ಝುಬೇರ್.ಎನ್., ಮಹಾನಗರ ಪಾಲಿಕೆ ಆಯುಕ್ತ ಮಂಜುನಾಥ್ ಪಿ.ಎಸ್ ಸೇರಿದಂತೆ ಇತರರು ಉಪಸ್ಥಿತರಿರುವರು ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಬಿ.ನಾಗರಾಜ್ ಅವರು ತಿಳಿಸಿದ್ದಾರೆ.

ಸ್ವೀಪ್ ಹಾಗೂ ಮತದಾರರ ಮ್ಯಾಪಿಂಗ್ ಕುರಿತು ಪ್ರಗತಿ ಪರಿಶೀಲನೆ

ಮತದಾರರ ಮ್ಯಾಪಿಂಗ್‌ನಲ್ಲಿ ವಿಶೇಷ ಗಮನ ಹರಿಸಿ : ವಸ್ತ್ರದ

ಬಾಗಲಕೋಟೆ , ಫೆ.14-

ಮತದಾರರ ಪಟ್ಟಿಯ ಪರಿಶುದ್ಧತೆ ಚುನಾವಣೆಯ ಪಾರದರ್ಶಕತೆಗೆ ಮೂಲ ಸ್ತಂಭವಾಗಿದ್ದು, ಮತದಾರರ ಮ್ಯಾಪಿಂಗ್ ಕಾರ್ಯವನ್ನು ನಿಗದಿತ ಅವಧಿಯಲ್ಲಿ ಪೂರ್ಣಗೊಳಿಸಿ ಪ್ರತಿಯೊಬ್ಬ ಅರ್ಹ ನಾಗರಿಕನ ಹೆಸರು ಮತದಾರರ ಪಟ್ಟಿಯಲ್ಲಿ ಇರಲು ಬಗ್ಗೆ ಖಚಿತಪಡಿಸಬೇಕು ಎಂದು ರಾಜ್ಯ ಸ್ವೀಪ್ ನೋಡಲ್ ಅಧಿಕಾರಿ ಪಿ.ಎಸ್.ವಸ್ತ್ರದ ತಿಳಿಸಿದರು.



ಜಿಲ್ಲಾಧಿಕಾರಿಗಳ ಸಭಾಂಗಣದಲ್ಲಿ ಶುಕ್ರವಾರ ಜರುಗಿದ ಸ್ವೀಪ್ ಹಾಗೂ ಬಿಎಲ್‌ಓಗಳೊಂದಿಗೆ ಎಸ್.ಐ.ಆರ್ ಮ್ಯಾಪಿಂಗ್ ಪ್ರಗತಿ ಪರಿಶೀಲನೆ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು 2002 ಹಾಗೂ 2025 ಮತದಾರರ ಮ್ಯಾಪಿಂಗ್ ಕಾರ್ಯ ಮುತುವರ್ಜಿ ವಹಿಸಿ ಮಾಡಬೇಕಿದೆ. ಶೇ.50ಕ್ಕಿಂತ ಕಡಿಮೆ ಇರುವ ಮತಗಟ್ಟೆಗಳ ಪ್ರಗತಿಯ ಬಗ್ಗೆ ವಿಶೇಷ ಗಮನ ಹರಿಸಿ ಪ್ರಗತಿ ಸಾಧಿಸಬೇಕು. ಎಲ್ಲ ಮತದಾರರು ತಮ್ಮ ಹೆಸರುಗಳು ಮ್ಯಾಪಿಂಗ್ ಆಗಿರುವ ಬಗ್ಗೆ ಪರಿಶೀಲಿಸಿಕೊಳ್ಳಬೇಕು.

ಬಾಗಲಕೋಟೆ ವಿಧಾನಸಭಾ ಮತಕ್ಷೇತ್ರದ ಉಪ ಚುನಾವಣೆ ಸಮೀಪಿಸುತ್ತಿದ್ದು, ಮತದಾರರ ಮ್ಯಾಪಿಂಗ್ ಕಾರ್ಯದ ಬಗ್ಗೆ ಉಪವಿಭಾಗಾಧಿಕಾರಿಗಳು ಹಾಗೂ ತಹಶೀಲ್ದಾರರು ಹೆಚ್ಚಿನ ಗಮನ ಹರಿಸಲು ಸೂಚಿಸಿದರು.

ಮತಗಟ್ಟೆ ಮಟ್ಟದ ಅಧಿಕಾರಿಗಳು ಮನೆ ಮನೆಗೆ ಭೇಟಿ ನೀಡುವ ಮೂಲಕ ಮತ ಗಟ್ಟೆವಾರು ಮ್ಯಾಪಿಂಗ್, ಹೊಸ ಮತದಾರರ ಸೇರ್ಪಡೆ ಹಾಗೂ ಹೆಸರು ತಿದ್ದುಪಡಿ, ತೆಗೆದು ಹಾಕುವ ಅರ್ಜಿ ವಿಲೇವಾರಿಗಳ ಬಗ್ಗೆ ವಿವರ ವಾದ ಚರ್ಚೆ ನಡೆಸಿದರು.

ಉಪ ಚುನಾವಣೆ ಹಿನ್ನಲೆಯಲ್ಲಿ ಸ್ವೀಪ್ ಚಟುವಟಿಕೆಗಳನ್ನು ಹಮ್ಮಿಕೊಳ್ಳಲು ಕ್ರೀಯಾ ಯೋಜನೆ ರೂಪಿಸಬೇಕು. ಈಗಾಗಲೇ ಕ್ರೀಯಾ ಯೋಜನೆ ಸಿದ್ದಪಡಿಸಿಕೊಳ್ಳಲು ಸಂಬಂಧಿಸಿದ ಅಧಿಕಾರಿಗಳಿಗೆ ಸೂಚನೆ ನೀಡಿದರು. ಮತಗಟ್ಟೆ ಮಟ್ಟದ ಅಧಿಕಾರಿಗಳು ಅಧಿಕಾರಿಗಳು ಮನೆ ಮನೆ ಭೇಟಿ ನೀಡುವ ಸಂದರ್ಭಗಳಲ್ಲಿ ಇವಿಎಂ ಯಂತ್ರಗಳ ಕಾರ್ಯಚಟುವಟಿಕೆಗಳ ಬಗ್ಗೆ ಜನರಲ್ಲಿ ಅರಿವು ಮೂಡಿಸುವ ಕಾರ್ಯವಾಗಬೇಕೆಂದು ತಿಳಿಸಿದರು.

ನಂತರ ನವಗರದ ಡಾ.ಬಿ. ಆರ್.ಅಂಬೇಡ್ಕರ ಭವನದಲ್ಲಿ ನಡೆದ ಬಿಎಲ್‌ಓಗಳ ಸಭೆಯಲ್ಲಿ ಮತಗಟ್ಟೆ ಅಧಿಕಾರಿಗಳು ತಮ್ಮ ಮತಗಟ್ಟೆಗಳಲ್ಲಿ ಅಗತ್ಯ ಮೂಲ ಭೂತ ಸೌಲಭ್ಯಗಳು ಇರುವ ಬಗ್ಗೆ ಖಚಿತಪಡಿಸಿಕೊಳ್ಳಬೇಕು.

ರ್‍ಯಾಂಪ್ ವ್ಯವಸ್ಥೆ, ಕೊಠಡಿ ಸೂಸ್ಥಿತಿ ಇದ್ದ ಬಗ್ಗೆ, ವಿದ್ಯುತ್ ಸಂಪರ್ಕ ವ್ಯವಸ್ಥೆ ಸರಿಯಾಗಿ ಇರುವ ಬಗ್ಗೆ ಖಚಿತ ಪಡಿಸಿಕೊಳ್ಳಬೇಕು. ಮತದಾರರ ಮ್ಯಾಪಿಂಗ್ ಕಾರ್ಯದಲ್ಲಿ ಶೇ.100 ರಷ್ಟು ಕೆಲಸವಾಗಬೇಕು. ಈ ನಿಟ್ಟಿನಲ್ಲಿ ಮ್ಯಾಪಿಂಗ್ ಕಾರ್ಯವನ್ನು ಹಬ್ಬದ ಆಚರಣೆ ರೀತಿಯಲ್ಲಿ ಕಾರ್ಯ ನಡೆಸಬೇಕಿದೆ ಎಂದು ತಿಳಿಸಿದರು.

ಸಭೆಯಲ್ಲಿ ಜಿಲ್ಲಾಧಿಕಾರಿ ಸಂಗಪ್ಪ, ಅಪರ ಜಿಲ್ಲಾಧಿಕಾರಿ ಅಶೋಕ ತೇಲಿ, ಉಪವಿಭಾಗಾಧಿಕಾರಿ ಸಂತೋಷ ಜಗಲಾಸರ, ತಹಶೀಲ್ದಾರ ವಾಸುದೇವ ಸ್ವಾಮಿ, ಜಿ.ಪಂ ಸಹಾಯಕ ನಿರ್ದೇಶಕ ಎಸ್.ಎಂ. ಕಾಂಬಳೆ, ಸಹಾಯಕ ಯೋಜನಾಧಿಕಾರಿ ಭೀಮಪ್ಪ ತಳವಾರ, ಚುನಾವಣಾ ವಿಭಾಗದ ಮಹೇಶ ಪಾಂಡವ ಸೇರಿದಂತೆ ಇತರರು ಉಪಸ್ಥಿತರಿದ್ದರು.

ಕುಡಿಯುವ ನೀರಿನ ಗುಣಮಟ್ಟ, ಸ್ವಚ್ಛತೆ ಆದ್ಯತೆಯಾಗಬೇಕು: ಡಾ.ಯಲ್ಲಾ ರಮೇಶ್ ಬಾಬು

ಬಳ್ಳಾರಿ,ಫೆ.14-

ಜಿಲ್ಲೆಯಲ್ಲಿ ಕುಡಿಯುವ ನೀರಿನ ಗುಣಮಟ್ಟ ಮತ್ತು ಸ್ವಚ್ಛತೆಗೆ ಆದ್ಯತೆ ನೀಡಬೇಕು ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ ಡಾ.ಯಲ್ಲಾ ರಮೇ??? ಬಾಬು ಅವರು ಹೇಳಿದರು.



ಜಿಲ್ಲೆಯ ನಗರ, ಸ್ಥಳೀಯ ಸಂಸ್ಥೆಗಳ ಅಧಿಕಾರಿಗಳೊಂದಿಗೆ ಕುಡಿಯುವ ನೀರಿನ ಗುಣಮಟ್ಟದ ಕುರಿತು ಮತ್ತು ಸ್ವಚ್ಛತೆಯ ಕುರಿತು ಡಿಹೆ??? ಸಭಾಂಗಣದಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ ತ್ರೈಮಾಸಿಕ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ವಾಂತಿ, ಬೇಧಿ, ಕಾಲರ, ಕರಳು ಬೇನೆ ಹಾಗೂ ಅತಿಸಾರ ಬೇಧಿ ಮತ್ತು ಕಾಮಾಲೆ ಮುಂತಾದ ಸಾಂಕ್ರಾಮಿಕ ಕಾಯಿಲೆಗಳು ಹರಡದಂತೆ ಎಚ್ಚರವಹಿಸುವ ಮೂಲಕ ಅಂತರ ಇಲಾಖೆಗಳ ಸಹಯೋಗದಲ್ಲಿ ಕರ್ತವ್ಯ ನಿರ್ವಹಿಸಬೇಕು ಹಾಗೂ ಮುಂಜಾಗ್ರತೆ ಕ್ರಮ ಕೈಗೊಳ್ಳಬೇಕು ಎಂದು ತಿಳಿಸಿದರು.

ಜಿಲ್ಲಾ ಸರ್ವೇಕ್ಷಣಾಧಿಕಾರಿ ಹಾಗೂ ಜಿಲ್ಲಾ ರೋಗವಾಹಕ ಆಶ್ರೀತ ರೋಗಗಳ ನಿಯಂತ್ರಣಾಧಿಕಾರಿ ಡಾ.ಮರಿಯಂಬಿ ವಿ.ಕೆ ಅವರು ಮಾತನಾಡಿ, ನಗರ ಪ್ರದೇಶದಲ್ಲಿ ವರದಿಯಾಗುವ ಡೆಂಗ್ಯೂ ಪ್ರಕರಣಗಳಿಗೆ ನಿಯಂತ್ರಣ ಕ್ರಮ ಹಾಗೂ ಡೆಂಗ್ಯೂ ರೋಗ ನಿಯಂತ್ರಣ ಮತ್ತು ಮುಂಜಾಗೃತಾ ಕ್ರಮಗಳನ್ನು ಯಶಸ್ವಿಯಾಗಿ ಹಮ್ಮಿಕೊಳ್ಳಬೇಕು ಎಂದರು.

ಮುಖ್ಯವಾಗಿ ನಗರ ಪ್ರದೇಶದಲ್ಲಿ ನಿಂತ ನೀರಿನ ತಾಣಗಳನ್ನು ಮತ್ತು ಘನತಾಜ್ಯ ಸ್ವಚ್ಛತೆಗೊಳಿಸುವುದರಿಂದ ಸಾಂಕ್ರಾಮಿಕ ರೋಗಗಳನ್ನು ತಡೆಗಟ್ಟಬಹುದು. ಜೊತೆಗೆ ಅವಶ್ಯಕತೆ ಇದ್ದಲ್ಲಿ ಒಳಾಂಗಣ ಮತ್ತು ಹೊರಾಂಗಣದಲ್ಲಿ ಧೂಮೀಕರಣ ಮಾಡಬೇಕು ಎಂದರು. ಜಿಲ್ಲಾ ಕ್ಷಯರೋಗ ನಿರ್ಮೂಲನಾ ಕಾರ್ಯಕ್ರಮ ಅಧಿಕಾರಿ ಡಾ.ಇಂದ್ರಾಣಿ.ವಿ ಅವರು ಮಾತನಾಡಿ, 2025 ರ ಅಂಕಿ-ಅಂಶ ಪ್ರಕಾರ ಜಿಲ್ಲೆಯ ನಗರಪ್ರದೇಶಗಳಲ್ಲಿ ಹೆಚ್ಚಿನ ದುರ್ಬಲ ವರ್ಗದ ಜನರ ಸಂಖ್ಯೆಯಿದ್ದು, ಇವರಲ್ಲಿ ಕ್ಷಯರೋಗದ ಪ್ರಮಾಣ ಜಾಸ್ತಿ ಕಂಡುಬಂದಿರುತ್ತದೆ. ಇದಕ್ಕೆ ಕಾರಣ ಅಪೌಷ್ಟಿಕತೆ, ಸ್ವಚ್ಛತೆಯಿಲ್ಲದಿರುವುದು, ಶುದ್ದ ಗಾಳಿ, ಬೆಳಕು ಬಾರದೇ ಇರುವಂತಹ ಮನೆಗಳಲ್ಲಿ ವಾಸ, ಕೊಳಚೆ ಪ್ರದೇಶ ಹಾಗೂ ಇತರೆ ಕಾರಣಗಳಿಂದ ಧೂಳಿನ ಪ್ರಮಾಣ ಹೆಚ್ಚಾಗಿರುವುದರಿಂದ ಈ ಭಾಗದಲ್ಲಿ ಹೆಚ್ಚಾಗಿ ಕಂಡುಬಂದಿದೆ ಎಂದು ತಿಳಿಸಿದ ಅವರು, ಸ್ವಚ್ಛತೆಗೆ ಮಹತ್ವ ನೀಡಲು ಮಹಾನಗರ ಪಾಲಿಕೆಯ ಕಾರ್ಯನಿರ್ವಾಹಕ ಅಭಿಯಂತರರಿಗೆ ಹೇಳಿದರು.

ಮಹಾನಗರ ಪಾಲಿಕೆಯ ಕಾರ್ಯನಿರ್ವಾಹಕ ಅಭಿಯಂತರರಾದ ಮಲ್ಲನಗೌಡ ಅವರು, ಪಾಲಿಕೆಯ ವತಿಯಿಂದ ಸ್ವಚ್ಛ ಕುಡಿಯುವ ನೀರಿನ ನಿರ್ವಹಣೆ ಹಾಗೂ ತಾಣಗಳ ಬಗ್ಗೆ ವಿವರಿಸಿದರು.

ಸಭೆಯಲ್ಲಿ ಕುಡಿಯಲು ಯೋಗ್ಯತೆ ಇಲ್ಲದ ನೀರಿನ ತಾಣಗಳ ಬಗ್ಗೆ ನಗರ ವೈದ್ಯಾಧಿಕಾರಿಗಳು ತಿಳಿಸಿರುವ ಸ್ಥಳಗಳಲ್ಲಿ ಹಮ್ಮಿಕೊಳ್ಳಬೇಕಾದ ಕ್ರಮಗಳ ಬಗ್ಗೆ, ಪುರಸಭೆಯ ಮುಖ್ಯ ಅಧಿಕಾರಿಗಳು ಹಾಗೂ ಪಟ್ಟಣ ಪಂಚಾಯಿತಿ ಮತ್ತು ಮಹಾನಗರ ಪಾಲಿಕೆಯ ಅಭಿಯಂತರರವರೊಂದಿಗೆ ಚರ್ಚಿಸಲಾಯಿತು.

ಕುಡಿಯುವ ನೀರಿನ ಕ್ಲೋರಿನೇಷನ್ ಮಾಡುವ ವಿಧಾನದ ಬಗ್ಗೆ ಮಹಾನಗರ ಪಾಲಿಕೆಯ ಸಿಬ್ಬಂದಿಯವರಿಗೆ ವಿಡಿಯೋ ಮೂಲಕ ತರಬೇತಿ ನೀಡಲಾಯಿತು.

ಈ ಸಂದರ್ಭದಲ್ಲಿ ಜಿಲ್ಲೆಯ ಎಲ್ಲಾ ನಗರ ಪ್ರಾಥಮಿಕ ಆರೋಗ್ಯ ಕೇಂದ್ರಗಳ ವೈದ್ಯಾಧಿಕಾರಿಗಳು, ಮಹಾನಗರ ಪಾಲಿಕೆಯ ಅಭಿಯಂತರರು, ಪುರಸಭೆ-ಪಟ್ಟಣ ಪಂಚಾಯಿತಿ ಮುಖ್ಯ ಅಧಿಕಾರಿಗಳು, ಜಿಲ್ಲಾ ಸರ್ವೇಕ್ಷಣಾ ಘಟಕದ ಮೇಲ್ವಿಚಾರಣಾ ಸಿಬ್ಬಂದಿ, ಕಾಲಾರ ನಿಯಂತ್ರಣ, ಜಿಲ್ಲಾ ರೋಗವಾಹಕ ಆಶ್ರೀತ ರೋಗಗಳ ನಿಯಂತ್ರಣಾಧಿಕಾರಿ ಕಚೇರಿ-ಸಿಬ್ಬಂದಿ ಉಪಸ್ಥಿತರಿದ್ದರು.



ಆದಾಯ ತೆರಿಗೆ ಟಿ.ಡಿ.ಎಸ್ ಕಡ್ಡಾಯ : ಭುವನೇಶ್ವರ ಯಲ್ಲಾಪುರಮಠ

ಬಾಗಲಕೋಟೆ , ಫೆ.14-

ಆದಾಯ ತೆರಿಗೆ ಟಿಡಿಎಸ್ ಹಣವನ್ನು ನಿಗದಿತ ಅವಧಿಯ ಒಳಗಾಗಿ ಸಂದಾಯಯ ಮಾಡಿ ಎಂದು ಆದಾಯ ತೆರಿಗೆ ಬೆಳಗಾವಿ ವಿಭಾಗದ ಆದಾಯ ತೆರಿಗೆ ಅಧಿಕಾರಿ ಭುವನೇಶ್ವರ ಯಲ್ಲಾಪುರಮಠ ಹೇಳಿದರು.

ಅವರು ನಗರದ ಬಿವಿವಿ ಸಂಘದ ಮಿನಿ ಸಭಾಭವನದಲ್ಲಿ ಆದಾಯ ತೆರಿಗೆ ಟಿ.ಡಿ.ಎಸ್ ವಂತಿಗೆ ಪಾವತಿಯಿಂದ ಆಗುವ ಲಾಭಗಳ ಕುರಿತು ಗುರುವಾರ ನೆಡೆದ ವಿಚಾರ ಸಂಕೀರ್ಣದಲ್ಲಿ ಮುಖ್ಯ ಅತಿಥಿಗಳಾಗಿ ಮಾತನಾಡಿದ ಅವರು ಆದಾಯ ತೆರಿಗೆಯ ಟಿ.ಡಿ.ಎಸ್ ಹಣವನ್ನು ನಿಗದಿತ ಅವಧಿಯ ಒಳಗಾಗಿ ಸಂದಾಯ ಮಾಡಬೇಕು, ಇಲ್ಲವೆ ದಂಡಪಾವತಿಸಬೇ ಕಾಗುತ್ತದೆ ಎಂದ ಜೊತೆಗೆ ಟಿಡಿಎಸ್ ನಿಬಂಧನೆಗಳ ಅನುಸರಣೆಗೆ ಪ್ರಾಥಮಿಕ ಜವಾಬ್ದಾರಿ ಸೇರಿದಂತೆ ಅನೇಕ ವಿಷಯಗಳ ಬಗ್ಗೆ ತಿಳಿಸಿದರು.

ಅತಿಥಿಗಳಾಗಿ ಆಗಮಿಸಿ ಮಾತನಾಡಿದ ತೆರಿಗೆ ಅಧಿಕಾರಿಗಳಾದ ಆರ್.ಬಿ.ಕಬ್ಬಲಗೇರಿ ಅವರು ಬಿ.ವಿ.ವಿ.ಸಂಘವು ಆದಾಯ ತೆರಿಗೆಯನ್ನು ಪಾವತಿ ಮಾಡುವ ವಿಷಯದಲ್ಲಿ ಮುಂಚೂಣಿಯಲ್ಲಿದೆ ಹಾಗೂ ಇದೊಂದು ಮಾದರಿ ಸಂಸ್ಥೆಯಾಗಿದೆ ಎಂದು ಶ್ಲಾಘಿಸಿದರು. ಸಂಘದ ಲೆಕ್ಕಪರಿಶೋಧಕ ವಿಭಾಗದ ಪ್ರಭಾರಿ ಕುಮಾರ ಜಿಗಜಿನ್ನಿ ಮಾತನಾಡಿ ಆದಾಯ ತೆರಿಗೆ ಕುರಿತು ಸಂವಾದ ನಡೆಸಿದರು. ಸಂಘದ ಆಡಳಿತಾಧಿಕಾರಿಯಾದ ವಿ.ಆರ್. ಶಿರೂಳ ಅವರು ಅಧ್ಯಕ್ಷತೆಯನ್ನು ವಹಿಸಿದ್ದರು, ಇದೇ ಸಂದರ್ಭದಲ್ಲಿ ಮುಖ್ಯ ಅತಿಥಿಗಳನ್ನು ಸನ್ಮಾನಿಸಿ ಗೌರವಿಸಲಾಯಿತು. ಕಾರ್ಯಕ್ರಮದಲ್ಲಿ ನಿಜಲಿಂಗಪ್ಪ ವೈದ್ಯಕೀಯ ಮಹಾವಿದ್ಯಾಲಯ ಪ್ರಾಚಾರ್ಯ ಭುವನೇಶ್ವರಿ ಯಳಮೇಲಿ, ಸಂಘದ ಲೆಕ್ಕಾಧಿಕಾರಿ ಓಂಕಾರ ಹಾಗೂ ಬಸವ ರಾಜ ಸೇರಿದಂತೆ ಸಂಸ್ಥೆಯ ಪ್ರತಿನಿಧಿಗಳು ಭಾಗವಹಿಸಿದ್ದರು.

ಕುರುಗೋಡು ಉತ್ಸವ: ಭರದ ಸಿದ್ಧತೆ

ಬಳ್ಳಾರಿ,ಫೆ.14-

ಸಿಂದರ ರಾಜಧಾನಿಯಾಗಿದ್ದ ಕುರುಗೋಡು ಪಟ್ಟಣದ ಐತಿಹಾಸಿಕ ಹಾಗೂ ಸಾಂಸ್ಕೃತಿಕ ವೈಭವವನ್ನು ಪರಿಚಯಿಸುವ ನಿಟ್ಟನಲ್ಲಿ ಕುರುಗೋಡು ಪಟ್ಟಣವು ತನ್ನ ಚೊಚ್ಚಲ ಉತ್ಸವ ಆಚರಣೆಯ ಸಂಭ್ರಮದಲ್ಲಿದೆ. ಇದೇ ಫೆ.15 ಮತ್ತು 16 ರಂದು ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಎರಡು ದಿನಗಳ ಕುರುಗೋಡು ಉತ್ಸವ ಆಯೋಜಿಸಿದೆ.

ಉತ್ಸವದ ಆಕರ್ಷಣೆಗೆ ಈಗಾಗಲೇ ಕುರುಗೋಡು ತಾಲ್ಲೂಕು ಆಡಳಿತವು ವಿದ್ಯುತ್ ದೀಪಗಳಿಂದ ಕುರುಗೋಡು ಪಟ್ಟಣದ ಮುಖ್ಯ ರಸ್ತೆಗಳ ಅಲಂಕಾರ, ವಿವಿಧೆಡೆ ಸ್ವಚ್ಛತಾ ಕಾರ್ಯ, ಪ್ರಚಾರ ಕಾರ್ಯ ಸೇರಿದಂತೆ ಹಲವು ಕಾರ್ಯಗಳನ್ನು ಕೈಗೊಂಡಿದೆ.

ಉತ್ಸವವನ್ನು ಜನೋತ್ಸವವನ್ನಾಗಿಸಲು ತಾಲ್ಲೂಕು ಆಡಳಿತದ ಅಧಿಕಾರಿಗಳು ಮನೆ-ಮನೆ ಭೇಟಿ ನೀಡಿ ಉತ್ಸವಕ್ಕೆ ಆಹ್ವಾನ ನೀಡುತ್ತಿದ್ದಾರೆ. ಅಷ್ಟೇ ಅಲ್ಲದೇ, ಜನಾಕರ್ಷಣೆಗಾಗಿ ಉತ್ಸವದಲ್ಲಿ ಹಲವು ರೀತಿಯ ವಿವಿಧ ಸ್ಪರ್ಧಾ ಕಾರ್ಯಕ್ರಮಗಳನ್ನು ಆಯೋಜಿಸಿದೆ.

ಇತಿಹಾಸ: ಕುರುಗೋಡು ಪ್ರದೇಶದ ಇತಿಹಾಸವು ಶಿಲಾಯುಗದ ಕಾಲದಿಂದ ಪ್ರಾರಂಭವಾಗುತ್ತದೆ. ಶಿಲಾಯುಗದ ಕಾಲದ ಮಾನವರ ವಾಸದ ನೆಲೆಗಳು, ಬರೆದ ಗುಹಾಚಿತ್ರಗಳು ಮತ್ತು ಉಪಯೋಗಿಸುತ್ತಿದ್ದ ಶಿಲಾಯುಧಗಳನ್ನು ಶೋಧಿಸಲಾಗಿದೆ. ಮಹಾಭಾರತದ ಕಾಲದಲ್ಲಿ ಕುಂತಳ ರಾಜ್ಯದ ರಾಜಧಾನಿಯಾಗಿದ್ದ ಇಲ್ಲಿ, ಸುಪ್ರಸಿದ್ಧ ಅರಸ ಚಂದ್ರಹಾಸನು ರಾಜ್ಯಭಾರ ಮಾಡಿದ್ದಾನೆಂದು ಪ್ರತೀತಿ ಇದೆ.

ನಂತರ ಈ ಪ್ರದೇಶವು ಮೌರ್ಯರು, ಶಾತವಾಹನರು, ಬಾದಾಮಿ ಚಾಲುಕ್ಯರು ಮತ್ತು ಕಲ್ಯಾಣದ ಚಾಲುಕ್ಯರ ಆಡಳಿತಕ್ಕೊಳಪಟ್ಟಿತ್ತು. ಕಲ್ಯಾಣದ ಚಾಲುಕ್ಯರ ಸಾಮಾಂತರಾಗಿದ್ದ ಸಿಂದ ವಂಶದ 11 ಅರಸರು ಇಲ್ಲಿ ಕ್ರಿ.ಶ 950 ರಿಂದ 1200 ರ ವರೆಗೆ, ಸುಮಾರು 250 ವರ್ಷಗಳ ಕಾಲ ಸಂಪತ್ತು-ಸಮೃದ್ದಿಯಿಂದ ''ಬಲ್ಲಕುಂದೆ 300 ನಾಡನ್ನು'' ಆಳಿದ್ದಾರೆ ಎಂದು ತಿಳಿಯಬಹುದು.

ಈ ಸಿಂದ ಅರಸರು ಈ ನಾಡಿನ ರಾಜಧಾನಿಯನ್ನು ಕುರುಗೋಡಿನಲ್ಲಿ ಇಂದ್ರನ ಅಮರಾವತಿಯಂತೆ ಅತ್ಯಂತ ಸುಂದರವಾಗಿ ನಿರ್ಮಿಸಿ,



ಬಂಧುರವಾದ ಕೋಟೆಯನ್ನು ಕಟ್ಟಿಸಿ, ಕಲ್ಲೇಶ್ವರ, ಸಂಗಮೇಶ್ವರ, ಉಜ್ಜಾಳೇಶ್ವರ, ತ್ರಿಕೂಟೇಶ್ವರ ಮೊದಲಾದ ಕಲಾತ್ಮಕವಾದ ಹಲವಾರು ದೇವಾಲಯಗಳನ್ನು ಮತ್ತು ಜೈನ ಬಸದಿಗಳನ್ನು ನಿರ್ಮಿಸಿರುವುದು ಪಟ್ಟಣದ ಸುತ್ತ-ಮುತ್ತ ಹಾಗೂ ಹೊರವಲಯ ಕಾಣಬಹುದಾಗಿದೆ.

ಐತಿಹಾಸಿಕ ದೊಡ್ಡಬಸವೇಶ್ವರನ ಏಕಾಶಿಲಾ ಮೂರ್ತಿ: ಕ್ರಿ.ಶ.1336 ರಲ್ಲಿ ವಿಜಯನಗರ ಸಾಮ್ರಾಜ್ಯವನ್ನು ಹಂಪಿಯಲ್ಲಿ ಸ್ಥಾಪಿಸಿದ ಹರಿಹರ ಬುಕ್ಕ ಸಹೋದರ ಪಿತ ಸಂಗಮನು ಕುರುಗೋಡು ಮೂಲದವನೆಂದು ಸಂಶೋಧನೆಯಿಂದ ತಿಳಿಯಬಹುದಾಗಿದೆ. ಈತನೇ ಕುರುಗೋಡಿನಲ್ಲಿ ಭವ್ಯವಾದ ಸಂಗಮೇಶ್ವರ ದೇವಾಲಯನ್ನು ನಿರ್ಮಿಸಿರುವನು.

ನಂತರ ವಿಜಯನಗರ ಸಾಮ್ರಾಜ್ಯದಲ್ಲಿ ವಿಲೀನವಾಗಿದ್ದ ಕುರುಗೋಡಿನಲ್ಲಿ, ಹಂಪೆಯ ಅಧಿಪತಿ ಶ್ರೀ ಪಂಪಾ-ವಿರುಪಾಕ್ಷೇಶ್ವರ ಗೆ ಅಭಿಮುಖವಾಗಿ, ಎದುರು ಬಸವಣ್ಣನ ಸಂಕೇತಿಕವಾಗಿ 13 ಅಡಿ ಎತ್ತರದ ದಕ್ಷಿಣ ಭಾರತದಲ್ಲೇ ಎರಡನೇ ಅತಿದೊಡ್ಡದಾದ ದೊಡ್ಡಬಸವೇಶ್ವರನ ಬೃಹದ್ಾಕಾರದ ಏಕಶಿಲಾ ಮೂರ್ತಿಯನ್ನು ನಿರ್ಮಿಸಲಾಗಿದೆ. ಇದೇ ಕಾಲದಲ್ಲಿ ಈ ಪಟ್ಟಣದಲ್ಲಿ 10 ಅಡಿ ಮತ್ತು 20 ಅಡಿ ಎತ್ತರದ ಬೃಹದ್ಧಾಕಾರದ 2 ಗಣೇಶ ವಿಗ್ರಹಗಳನ್ನು ನಿರ್ಮಿಸಲಾಗಿದ್ದು, ಇವುಗಳನ್ನು ಕಾಣಬಹುದಾಗಿದೆ.

ವಿಜಯನಗರ ಸಾಮ್ರಾಜ್ಯದ ಕಾಲದಲ್ಲಿ ನಿರ್ಮಿತವಾದ ದೊಡ್ಡ ಬಸವೇಶ್ವರ ದೇವಾಲಯ ಮತ್ತು ಹಲವು ಬೃಹದಾಕಾರದ ಮೂರ್ತಿ ಶಿಲ್ಪಗಳು ವಿಜಯನಗರದ ಶಿಲ್ಪಕಲೆಯ ಮಾದರಿಯಲ್ಲಿ ವೈಶಿಷ್ಟ ಪೂರ್ಣವಾಗಿ ನಿರ್ಮಿತವಾಗಿವೆ.



ಕೋಟ್ಪಾ ದಾಳಿ : 36 ಪ್ರಕರಣ ದಾಖಲು

ಬಾಗಲಕೋಟೆ , ಫೆ.14-

ಜಿಲ್ಲೆಯಲ್ಲಿ ಫೆಬ್ರವರಿ 7, 9 ಹಾಗೂ 12 ರಂದು ನಗರದ ಜಿಲ್ಲಾ ಡಳಿತ ಭವನ, ತಹಶೀಲ್ದಾರ ಕಚೇರಿ ಹಾಗೂ ನವನಗರದಲ್ಲಿ ತಂಬಾಕು ಉತ್ಪನ್ನಗಳ ಮಾರಾಟ ಅಂಗಡಿಗಳ ಮೇಲೆ ತಂಬಾಕು ನಿಯಂತ್ರಣ ತಂಡ ಅನಿರೀಕ್ಷಿತವಾಗಿ ದಾಳಿ ನಡೆಸಿ ನಿಯಮ ಉಲ್ಲಂಘನೆ ಆರೋಪದಡಿ 36 ಪ್ರಕಟಣಗಳನ್ನು ದಾಖಲಿಸಿದೆ. ತಂಬಾಕು ಉತ್ಪನ್ನಗಳ ಸಗಟು ಚಿಲ್ಲರೆ ಮಾರಾಟಗಾರರ ಅಂಗಡಿಗಳ ಮೇಲೆ ದಾಳಿ ನಡೆಸಿ ಕೋಟ್ಪಾ ಕಾಯ್ದೆ-2003ರ 4 ಮತ್ತು 6 ಸೆಕ್ಷನ್‌ಗಳ ಉಲ್ಲಂಘಿಸಿದವರ ವಿರುದ್ಧ ಒಟ್ಟು 36 ಪ್ರಕರಣಗಳನ್ನು ದಾಖಲಿಸಿ ಒಟ್ಟು 20,500 ರೂ.ಗಳ ವಿಧಿಸಿದೆ. ಹಾಗೂ ಸರ್ಕಾರಿ ಕಛೇರಿಗಳಲ್ಲಿ ತಂಬಾಕು ಉತ್ಪನಗಳನ್ನು ಬಳಸದಂತೆ ಎಚ್ಚರಿಕೆ ನೀಡಲಾಯಿತು.

ತಂಬಾಕು ಉತ್ಪನ್ನಗಳ ಮಾರಾಟಗಾರರಿಗೆ ತಮ್ಮ ಅಂಗಡಿಗಳಲ್ಲಿ ಕಡ್ಡಾಯವಾಗಿ ಸಾರ್ವಜನಿಕ ಸ್ಥಳಗಳಲ್ಲಿ ಧೂಮಪಾನ ನಿಷೇಧ ಫಲಕ ಹಾಕುವುದು, ತಂಬಾಕು ಮಾರಾಟ ಪರವಾನಿಗೆ ಹಾಗೂ ತಂಬಾಕು ಉತ್ಪನ್ನಗಳ ಬಗ್ಗೆ ಗೋಡೆ ಬರಹ, ಹೋರ್ಡಿಂಗ್ಸ್ ದೃಶ್ಯ ಹಾಗೂ ಮುದ್ರಣ ಮಾಧ್ಯಮದ ಮೂಲಕ ತಂಬಾಕು ಉತ್ಪನ್ನಗಳ ಜಾಹೀರಾತು ಮಾಡಬಾರದೆಂದು ಕರಪತ್ರ ನೀಡುವ ಮೂಲಕ ತಿಳಿಹೇಳಿದರು.

ಸೆಕ್ಷನ್ 6 (ಬಿ) ಕಾಯ್ದೆ ಅನುಸಾರ ಶಿಕ್ಷಣ ಸಂಸ್ಥೆಗಳ ಸುತ್ತಮುತ್ತ 100 ಮೀಟರ್ ವ್ಯಾಪ್ತಿಯಲ್ಲಿ ತಂಬಾಕು ಉತ್ಪನ್ನಗಳ ಮಾರಾಟ ನಿಷೇಧಿಸಲಾಗಿದೆ ಉಲ್ಲಂಘನೆಯಾದರೆ ದಂಡ ಹಾಗೂ ಸೆರೆವಾಸ ಶಿಕ್ಷೆ ವಿಧಿಸಲಾಗುವುದು ಎಂದು ತಿಳಿಸಿದರು. ದಾಳಿಯಲ್ಲಿ ಜಿಲ್ಲಾ ಸಮೀ ಕ್ಷಣಾಧಿಕಾರಿಗಳಾದ ಡಾ|| ದಯಾನಂದ ಕರೆಣವರ, ಜಿಲ್ಲಾ ತಂಬಾಕು ಸಲಹೆಗಾರರಾದ ಶಶಿಕಾಂತ ಕುಮತಳ್ಳಿ, ಜಿಲ್ಲಾ ಆರೋಗ್ಯ ಮೇಲ್ವಿಚಾರಣಾಧಿಕಾರಿಗಳಾದ ಬಸವರಾಜ ಹೊಸಳ್ಳಿ, ಹಾಗೂ ತನಿಕಾ ದಳದ ಇತರ ಸದಸ್ಯರು ಭಾಗವಹಿಸಿದ್ದರು.

ಒಂದನೇಯ ಪುಟದಿಂದ

ವಾತ್ಸಲ್ಯ ಯೋಜನೆಯಲ್ಲಿ 3 ನೇ ಮನೆ ಹಸ್ತಾಂತರ ಶ್ರೀಕ್ಷೇತ್ರ ಸಮಾಜ ಮುಖಿ ಕೆಲಸ ಮಾಡುತ್ತಿದೆ - ಎ ಚಂದ್ರಶೇಖರ

ಇದುವರೆಗೆ ಸಿರವಾರ ತಾಲ್ಲೂಕಿನಲ್ಲಿ 03 ವಾತ್ಸಲ್ಯ ಮನೆ, ಜಿಲ್ಲೆಯಲ್ಲಿ 15 ಮನೆ, ಪ್ರಾದೇಶಿಕ ವ್ಯಾಪ್ತಿಯಲ್ಲಿ 113 ಮನೆ ರಾಜ್ಯದಲ್ಲಿ 674 ವಾತ್ಸಲ್ಯ ಮನೆ ರಚನೆ ಮಾಡಿ ಫಲಾನುಭವಿಗೆ ಹಸ್ತಾಂತರ ಮಾಡಲಾಗಿದೆ ಎಂದರು.

ಈ ಸಂದರ್ಭ ಪಟ್ಟಣಪಂಚಾಯತಿ ಅಧ್ಯಕ್ಷರಾದ ಹಾಜಿ ಚೌದ್ರಿ ಮಾತನಾಡಿ ಜನಪ್ರತಿನಿಧಿಗಳು ಮಾಡುವ ಕೆಲಸವನ್ನು ಶ್ರೀಕ್ಷೇತ್ರದಿಂದ ಮಾಡುತ್ತಿದೆ. ಪಂಚಾಯತಿಯಿಂದ ಮನೆ ಮಂಜೂರಾದರೆ ಮೊದಲು ಇವರಿಗೆ ಮನೆ ನೀಡಬೇಕು ಎಂದಿದೆ. ನೀವು ಇವರನ್ನು ಆಯ್ಕೆ ಮಾಡಿ ನಮ್ಮ ಕೆಲಸ ಕಡಿನೆ ಮಾಡಿದ್ದಿರಿ. ಧನ್ಯವಾದಗಳು ಎಂದರು. ಪ.ಪಂಚಾಯತಿ ಉಪಾಧ್ಯಕ್ಷೆ ಲಕ್ಷ್ಮೀ ಆದಪ್ಪ, ಮಾಜಿ ಅಧ್ಯಕ್ಷ ವೈ,ಭೂಪನಗೌಡ, ಜಿಲ್ಲಾ ನಿರ್ದೇಶಕ ರಾಘವೇಂದ್ರ ಪಟಗಾರ, ಜಿಲ್ಲಾ ಜನಜಾಗೃತಿ ವೇದಿಕೆ ಜಿಲ್ಲಾಧ್ಯಕ್ಷ ಅಮರೇಶ ಮಸ್ಕಿ, ಜಿಲ್ಲಾ ವೇದಿಕೆ ಕೋಶಾಧಿಕಾರಿ ಅಯ್ಯನಗೌಡ ಎರೆಡ್ಡಿ, ವೇದಿಕೆ ಸದಸ್ಯ ಜ್ಞಾನಮಿತ್ರ, ತಾಲೂಕು ಯೋಜನಾಧಿಕಾರಿ ಚಂದ್ರಹಾಸ, ಲಯನ್ಸ್ ಕ್ಲಬ್ ಅಧ್ಯಕ್ಷ ಉ ವೀರೇಶ, ತಾಲೂಕು ಪತ್ರಕರ್ತರ ಸಂಘದ ಅಧ್ಯಕ್ಷ ಹನುಮೇಶ, ಪತ್ರಕರ್ತ ಸುರೇಶ್ ಹೀರಾ, ಜ್ಞಾನವಿಕಾಸ ಸಮನ್ವಯಾಧಿಕಾರಿ ಯಶೋಧ,ಮೇಲ್ವಿಚಾರಕಿ ವನಿತಾ ಸೇವಾ ಪ್ರತಿನಿಧಿಗಳು ಸಿಎಸ್‌ಸಿ ಸೇವಾದಾರರು ಹಾಗೂ ಗ್ರಾಮಸ್ಥರು ಭಾಗವಹಿಸಿದ್ದರು

ಆದಿ ಜಾಂಬವ ನಿಗಮದ ಅಧ್ಯಕ್ಷ ಮಂಜುನಾಥ ಸಿರವಾರಕ್ಕೆ ಭೇಟಿ. ಯುವ ಜನತೆ ಸ್ವವಲಂಬಿಗಳಾಗಬೇಕು - ಮಂಜುನಾಥ

ಪೀಳಿಗೆಗೆ ಲಾಭವಾಗಲಿದೆ,

ದೇವದಾಸಿಯರಿಗೆ ಸರ್ಕಾರದಿಂದ 30 ಕೋಟಿ ರೂಪಾಯಿ ಅನುದಾನ ನೀಡಲಾಗಿದೆ, ದೇವದಾಸಿ ಪದ್ಧತಿ ನಿರ್ಮೂಲನೆ ಹಂತದಲ್ಲಿ ಇದೆ ಎಂದರು.

ಈ ಸಂದರ್ಭದಲ್ಲಿ ಎಂ.ಆರ್.ಹೆಚ್ ಎಸ್ ಜಿಲ್ಲಾದ್ಯಕ್ಷ ಅಬ್ರಾಹಂ ಹೊನ್ನಟಗಿ, ಪ.ಪಂ.ಸದಸ್ಯರಾದ ಅಜೀತ್ ಹೊನ್ನಟಗಿ,ಮಾರ್ಕಪ್ಪ, ಡಿ.ಜಯಪ್ಪ, ಚೆನ್ನಪ್ಪ ಬೂದಿನಾಳ, ಮುದಕಪ್ಪ ಮರಕಂದಿನ್ನಿ,ಮುತ್ತಣ್ಣ ಚಾಗಭಾವಿ, ಶರಣಪ್ಪ ಬಲ್ಲಟಗಿ, ಏಸುಮಿತ್ರ, ಶಾಂತಪ್ಪ, ಮಲ್ಲಪ್ಪ,ನಿರಂಜನ,ಬಸವರಾಜ ಅತ್ತನೂರು,ಶಿವು, ಪ್ರಭಾಕರ್, ಹಾಗೂ ನಿಗಮದ ಎಂ.ಡಿ.ಮಂಜುನಾಥ ಹಾಗೂ ಸಿಬ್ಬಂದಿ ಸೇರಿದಂತೆ ಅನೇಕರು ಇದ್ದರು.

ಸಿರವಾರ ರಾಯಚೂರು ಜಿಲ್ಲೆಯಲ್ಲಿ ಉಳಿಯಲಿ ತುಂಗಭದ್ರಾ ನದಿ ಕುರಿತು 2 ದಿನ ಕಾರ್ಯಾಗಾರ ಪಾಲ್ಗೊಳಲು ಎನ್.ಉದಯಕುಮಾರ ಕರೆ

ಕಾರ್ಯಗಾರದಲ್ಲಿ ನೀರು ಬಳಕೆ, ಅಂತರ್ಜಲ ವೃಧಿಯ ಬಗ್ಗೆ, ಇನೂ ಅನೇಕ ವಿಷಯಗಳ ಬಗ್ಗೆ ತಿಳಿಸಲಾಗುವುದು ಯುವಕರು ಹೆಚ್ಚಿನ ಸಂಖ್ಯೆ ಭಾಗವಹಿಸಿ..ಮಾಹಿತಿ ನೀಡ ತುಂಗಭದ್ರ ಉಳಿಸಿ ಅಭಿಯಾನಕ್ಕೆ ಕೈ ಜೊಡಿಸಬೇಕು ಎಂದರು.

ಎನ್.ಉದಯಕುಮಾರ, ಕಲ್ಲೂರು ಬಸವರಾಜ ನಾಯಕ, ರಮೇಶ ದರ್ಶನಕರ್,ಎಂ.ಪ್ರಕಾಶ, ಅರಳಪ್ಪ ಯದ್ದಲದಿನ್ನಿ,ಪರಶುರಾಮ ಸರೋದೆ, ಎನ್.ಮಲ್ಲಪ್ಪ, ನಾಗೇಶ, ಶರಣಪ್ಪ ಮರಾಟ, ರಮೇಶ ಭೋವಿ, ಜಯಪ್ಪ ಹುಲ್ಲಿಗೆಪ್ಪ ಕರಿಬಿಲ್ಕರ್, ಬಸವಗೌಡ ಮುರ್ಕಿಗುಡ್ಡ, ಮಹೇಶ ಹಿರೇಮಠ, ರಾಜು ಬೋವಿ, ಇನ್ನಿತರರು ಇದರಿ

ಕಂಪ್ಲಿ ಉತ್ಸವ ಉದ್ಘಾಟಿಸಿ ಜಿಲ್ಲಾ ಉಸ್ತುವಾರಿ ಸಚಿವ ಬಿ.ಝೆಡ್.ಜಮೀರ್ ಅಹ್ಮದ್ ಖಾನ್

ಕಂಪ್ಲಿ ಕ್ಷೇತ್ರಕ್ಕೆ 3 ಸಾವಿರ ಮನೆ ಮಂಜೂರು ಮಾಡುವುದಾಗಿ ಭರವಸೆ





ಬಳ್ಳಾರಿ,ಫೆ.14-

ಕಳೆದ ಸಾಲಿನಲ್ಲಿ ಕಂಪ್ಲಿ ಕ್ಷೇತ್ರಕ್ಕೆ 2 ಸಾವಿರ ಮನೆ ನೀಡಿದ್ದು, ಬರುವ ಆರ್ಥಿಕ ಸಾಲಿಗೆ ಕಂಪ್ಲಿ ಕ್ಷೇತ್ರಕ್ಕೆ 3 ಸಾವಿರ ಮನೆಗಳನ್ನು ನೀಡಲಾಗುವುದು. ಒಟ್ಟಾರೆಯಾಗಿ ಎರಡೂವರೆ ವರ್ಷದಲ್ಲಿ 5 ಸಾವಿರ ಮನೆಗಳನ್ನು ವಿತರಿಸಲಾಗುವುದು ಎಂದು ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಹಾಗೂ ಬಳ್ಳಾರಿ ಜಿಲ್ಲಾ ಉಸ್ತುವಾರಿ ಸಚಿವ ಬಿ.ಝೆಡ್.ಜಮೀರ್ ಅಹ್ಮದ್ ಖಾನ್ ಅವರು ಹೇಳಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಕಂಪ್ಲಿ ಪಟ್ಟಣದ ಸುಂದರಿ ಸಕ್ಕರೆ ಕಾರ್ಖಾನೆ ಮೈದಾನದ ಗಂಡುಗಲಿ ಕುಮಾರರಾಮ ವೇದಿಕೆಯಲ್ಲಿ ಗುರುವಾರ ಆಯೋಜಿಸಲಾದ ಕಂಪ್ಲಿ ಉತ್ಸವಕ್ಕೆ ವಿದ್ಯುಕ್ತವಾಗಿ ಉದ್ಘಾಟಿಸಿ ಅವರು ಮಾತನಾಡಿದರು.

2013- 2018 ರ ವರೆಗಿನ ಅವಧಿಯ ಮುಖ್ಯಮಂತ್ರಿ ಸಿದ್ದರಾಮಯ್ಯನವರ ಸರ್ಕಾರವು ರಾಜ್ಯದಲ್ಲಿ ಸುಮಾರು 14.58 ಲಕ್ಷ ಮನೆಗಳನ್ನು ವಿತರಿಸಿದೆ. 2018-23 ರ ಅವಧಿಯ ಸಮ್ಮಿಶ್ರ ಸರ್ಕಾರ ಮತ್ತು ಬಿಜೆಪಿ ಸರ್ಕಾರ ಅವಧಿಯಲ್ಲಿ 5 ಲಕ್ಷ ಮನೆ ನೀಡಲಾಗಿದೆ. ಎಲ್ಲಾ ಮನೆಗಳು ಪೂರ್ಣ ಹಂತದಲ್ಲಿದೆ. ಆದರೆ ಪ್ರಸ್ತುತದಲ್ಲಿ ಯಾವುದೇ ಮನೆಗಳನ್ನು ಮಂಜೂರು ಮಾಡಿಲ್ಲ; ಸರ್ಕಾರ ನೀಡುವ ಅನುದಾನ ಸಾಮಾನ್ಯ ಜನರಿಗೆ ಹೊರೆಯಾಗಲಿದ್ದು, ಅನುದಾನ ಪರಿಷ್ಕರಣೆ ಕುರಿತು ಮುಖ್ಯಮಂತ್ರಿಯವರೊಂದಿಗೆ ಚರ್ಚಿಸಲಾಗಿದೆ ಎಂದರು.

2024ರಲ್ಲಿ ಮೊದಲ ಹಂತದಲ್ಲಿ 36,779 ಮನೆಗಳನ್ನು ಹಂಚಿಕೆ ಮಾಡಲಾಗಿತ್ತು. ಎರಡನೇ ಹಂತದಲ್ಲಿ 42,345 ಮನೆಗಳನ್ನು ಹಂಚಿಕೆ ಮಾಡಲಾಗುವುದು. ಮೂರನೇ ಹಂತದಲ್ಲಿ 36 ಸಾವಿರ ಮನೆಗಳನ್ನು ಜೂನ್ ತಿಂಗಳಲ್ಲಿ ಹಂಚಿಕೆ ಮಾಡಲಾಗುವುದು ಎಂದರು.

ಬಡವರ ಕಾಳಜಿ ಹೊಂದಿದ ಸರ್ಕಾರ ನಮ್ಮದು. ಕೊಟ್ಟ ಮಾತಿನಂತೆ ಪಂಚ ಗ್ಯಾರಂಟಿ ಯೋಜನೆಗಳನ್ನು ಪರಿಪೂರ್ಣವಾಗಿ ಜಾರಿಗೊಳಿಸಲಾಗಿದೆ. ಕಳೆದ ಸರ್ಕಾರದಲ್ಲಿ ಈ ಕ್ಷೇತ್ರಕ್ಕೆ 3 ಸಾವಿರ ಕೋಟಿ ಅನುದಾನ ಲಭಿಸಿದೆ. ನಮ್ಮ ಸರ್ಕಾರ ಬಂದ ಮೇಲೆ ಈ ಭಾಗಕ್ಕೆ ಎರಡೂವರೆ ವರ್ಷದಲ್ಲಿ ಸುಮಾರು 2,500 ಸಾವಿರ ಕೋಟಿ ರೂ. ಅನುದಾನ ನೀಡಿದೆ. ತಾಲ್ಲೂಕು ಮಟ್ಟದ ಉತ್ಸವವನ್ನು ಸರ್ಕಾರದ 70 ಲಕ್ಷ ರೂ. ವೆಚ್ಚದಲ್ಲಿ ಇಷ್ಟು ದೊಡ್ಡ ಮಟ್ಟದ ಕಾರ್ಯಕ್ರಮ ಆಯೋಜನೆ ಮಾಡಿರುವುದು ಹೆಮ್ಮೆಯ ಸಂಗತಿ. ಇದಕ್ಕೆ ಈ ಜನಸ್ತೋಮವೇ ಸಾಕ್ಷಿಯಾಗಿದೆ. ಕಂಪ್ಲಿಕ್ಷೇತ್ರದ ಮೇಲೆ ಶಾಸಕ ಗಣೇಶ್ ಅವರು ಇಟ್ಟಿರುವ ಪ್ರೀತಿ ಅಂತಹದ್ದು. ಮುಂಬರುವ ಉತ್ಸವಗಳಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯನವರನ್ನು ಆಹ್ವಾನಿಸಲಾಗುವುದು ಎಂದರು.

ಬಳ್ಳಾರಿ ಗ್ರಾಮೀಣ ಶಾಸಕ ಬಿ.ನಾಗೇಂದ್ರ ಅವರು ಮಾತನಾಡಿ, ಈ ಭಾಗದ ರೈತರ ಕ್ಷೇಮಾಭಿವೃದ್ಧಿಗೆ ಶ್ರಮಿಸುವ ಮತ್ತು ಜನಸಾಮಾನ್ಯರ ಕಷ್ಟ- ಕಾರ್ಪಣ್ಯಗಳಿಗೆ ತ್ವರಿತ ಸ್ಪಂದಿಸುವ ಭಗೀರಥ, ಸಹೃದಯಿ ಶಾಸಕ ಜೆ.ಎನ್ ಗಣೇಶ್ ಎಂದು ಹೇಳಿದರು.

ಶಾಸಕ ಗಣೇಶ್, ಕ್ಷೇತ್ರದ ಅಭಿವೃದ್ಧಿಗಾಗಿ ಅನುದಾನಕ್ಕಾಗಿ ಎಲ್ಲಾ ಸಚಿವರ ಕಚೇರಿಗಳಿಗೆ ಸಾಕಷ್ಟು ಅಲೆದಾಡುತ್ತಿದ್ದರು. ಈ ಉತ್ಸವದ ಅನುದಾನಕ್ಕಾಗಿ ಸಾಕಷ್ಟು ಅವಿರತರಾಗಿ ಶ್ರಮಿಸಿದ್ದಾರೆ. ಮುಂಬರುವ ಎಲ್ಲಾ ಕಂಪ್ಲಿ ಉತ್ಸವಗಳಿಗೆ ಜಿಲ್ಲೆಯ ಎಲ್ಲಾ ಶಾಸಕರ ಸಾಥ್ ಇರಲಿದೆ ಎಂದು ಹೇಳಿದರು.

ಕಂಪ್ಲಿ ಶಾಸಕರು ಹಾಗೂ ಕರ್ನಾಟಕ ರಾಜ್ಯ ಸಹಕಾರ ಕೈಮಗ್ಗ ನೇಕಾರರ ಮಹಾಮಂಡಳಿ ನಿಯಮಿತ (ಕಾವೇರಿ ಹ್ಯಾಂಡ್‌ಲೂಮ್ಸ್) ದ ಅಧ್ಯಕ್ಷರೂ ಆದ ಜೆ.ಎನ್.ಗಣೇಶ್ ಅವರು ಅಧ್ಯಕ್ಷತೆ ವಹಿಸಿ ಮಾತನಾಡಿ, ಕಂಪ್ಲಿಕ್ಷೇತ್ರದಲ್ಲಿ ಅಭಿವೃದ್ಧಿ ಪರ್ವವೇ ಆರಂಭಗೊಂಡಿದೆ. ಕಂಪ್ಲಿ-ಕುರುಗೋಡಿನಲ್ಲಿ ಮಿನಿ ವಿಧಾನಸೌಧ, 100 ಹಾಸಿಗೆಯುಳ್ಳ ಆಸ್ಪತ್ರೆ, ಮುಖ್ಯ ರಸ್ತೆಗಳ ನಿರ್ಮಾಣ, ಶಾಲಾ-ಕಾಲೇಜುಗಳು, ಕಂಪ್ಲಿ-ಗಂಗಾವತಿ ಸೇತುವೆ ಸೇರಿದಂತೆ ಹಲವಾರು ರೀತಿಯ ಅಭಿವೃದ್ಧಿ ಕಾರ್ಯಗಳು ನಡೆಯುತ್ತಿವೆ ಎಂದರು.

ಮನುಷ್ಯನಿಗೆ ಜೀವನದಲ್ಲಿ ಒಂದು ಅವಕಾಶ ದೊರೆಯಬೇಕು. ಆ ಅವಕಾಶ ಈಗ ನನಗೆ ದೊರೆತಿದ್ದು, ನನ್ನ ಕ್ಷೇತ್ರದ ಜನತೆಯ ಸೇವೆಗೈಯುತ್ತಿದ್ದೇನೆ. ಅಧಿಕಾರ ಶಾಶ್ವತವಲ್ಲ; ಪ್ರೀತಿ ವಿಶ್ವಾಸ ಮುಖ್ಯ. ಎರಡು ಬಾರಿ ನನ್ನನ್ನು ಶಾಸಕನನ್ನಾಗಿಮಾಡಿರುವ ಕಂಪ್ಲಿ-ಕುರುಗೋಡು ಜನತೆಗೆ ನನ್ನ ರಾಜಕೀಯ ನಿವೃತ್ತಿ ನಂತರವೂ ಆಭಾರಿಯಾಗಿರುತ್ತೇನೆ ಎಂದು ನುಡಿದು ಭಾವುಕರಾದರು.

ಈ ಭಾಗದ ರೈತರ ಜೀವನಾಡಿಯಾದ ತುಂಗಭದ್ರಾ ಅಣೆಕಟ್ಟೆಯ ಕ್ರಸ್ಟ್ ಗೇಟ್ ಅಳವಡಿಕೆ ಕಾರ್ಯ ನಡೆಯುತ್ತಿದ್ದು, ಮುಂದಿನ ಭವಿಷ್ಯದ ಸುಭದ್ರ, ಸುರಕ್ಷಿತ ದಿನಗಳಿಗಾಗಿ ರೈತರು ಸಹಕರಿಸಬೇಕಾಗಿದೆ. ಯಾರೂ ನಿರಾಶರಾಗಬಾರದು ಎಂದರಲ್ಲದೇ, ಸತತ ಮೂರು ತಿಂಗಳ ಪ್ರಯತ್ನದಿಂದ ಕಂಪ್ಲಿ-ಕುರುಗೋಡು ಉತ್ಸವ ಆಚರಿಸಲು ಅವಕಾಶ ದೊರೆತಿದೆ ಎಂದರು.

ಕಾರ್ಯಕ್ರಮಕ್ಕೂ ಆರಂಭಕ್ಕೂ ಮುನ್ನ ವಿವಿಧ ಕ್ಷೇತ್ರದಲ್ಲಿ ಸಾಧನೆಗೈದ ಸಾಧಕರನ್ನು ಸನ್ಮಾನಿಸಲಾಯಿತು.

ಈ ಸಂದರ್ಭದಲ್ಲಿ ಬಳ್ಳಾರಿ ನಗರ ಶಾಸಕ, ಡಾ.ಬಾಬು ಜಗಜೀವನ್‌ರಾಂ ಚರ್ಮ ಕೈಗಾರಿಕಾ ಅಭಿವೃದ್ದಿ ನಿಗಮದ ಅಧ್ಯಕ್ಷ ಮುಂಡರಗಿ ನಾಗರಾಜ್, ಕರ್ನಾಟಕ ಸ್ಟೇಟ್ ಮಿನಿರಲ್ಸ್ ಕಾರ್ಪೋರೇಷನ್ ಲಿಮಿಟೆಡ್ ನ ಉಪಾಧ್ಯಕ್ಷ ಹೆಚ್.ಲಕ್ಷ್ಮಣ್, ಬಳ್ಳಾರಿ ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಕೆ.ಇ.ಚಿದಾನಂದಪ್ಪ, ಕಂಪ್ಲಿ ತಾಲ್ಲೂಕು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಶ್ರೀನಿವಾಸರಾವ್, ಕಂಪ್ಲಿ ತಾಲ್ಲೂಕು ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ಅಧ್ಯಕ್ಷ ಹಬೀಬ್ ರೆಹಮಾನ್ ಸೇರಿದಂತೆ ತಾಲ್ಲೂಕು ಆಡಳಿತದ ಅಧಿಕಾರಿಗಳು-ಸಿಬ್ಬಂದಿ ವರ್ಗ, ಸಾರ್ವಜನಿಕರು ಇದ್ದರು. ಬಳಿಕ ಚಂದನ್ ಶೆಟ್ಟಿ ಮತ್ತು ತಂಡದವರಿಂದ ರಸಮಂಜರಿ ಸಂಗೀತ ಕಾರ್ಯಕ್ರಮ ಜರುಗಿದವು.

ಪರಮೇಶ್ವರ ರಾಜ್ಯದ ಮುಂದಿನ ನಾಯಕ : ಸಿಎಂ ಆಪ್ತ ಹಿಟ್ನಾಳ್

ಬೆಂಗಳೂರು, ಫೆ.14-

ಗೃಹ ಸಚಿವ ಡಾ.ಜಿ.ಪರಮೇಶ್ವರ್ ಅವರನ್ನು ಮುಂದೆ ನಾಡಿನ ಮುಖಂಡರಾಗಲಿರುವ ನಾಯಕರು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಆಪ್ತ ಶಾಸಕರೊಬ್ಬರು ಸಂಬೋಧಿಸುವ ಮೂಲಕ ಪ್ರಸಕ್ತ ರಾಜಕೀಯ ಬೆಳವಣಿಗೆಯಲ್ಲಿ ಕುತೂಹಲ ಕೆರಳಿಸಿದ್ದಾರೆ. ಅದರಲ್ಲೂ ಸರ್ಕಾರಿ ಸಮಾವೇಶದ ವೇದಿಕೆಯಲ್ಲೇ ಈ ರೀತಿ ಹೇಳಿಕೆ ನೀಡಿರುವುದು ನಾನಾರೀತಿಯ ವ್ಯಾಖ್ಯಾನಗಳಿಗೆ ಕಾರಣವಾಗಿದೆ. ಪ್ರಸ್ತುತ ರಾಜಕೀಯ ಬೆಳವಣಿಗೆಗಳಲ್ಲಿ ಪ್ರತಿಯೊಂದು ಮಾತುಗಳು ಬೇರೆ ಬೇರೆ ರೀತಿಯ ಅರ್ಥ-ಅನರ್ಥಗಳಿಗೆ ಕಾರಣವಾಗುತ್ತಿವೆ.

ಜನಪ್ರತಿನಿಧಿಗಳಾಗಿರುವವರು ಅಳೆದು ತೂಗಿ ಮಾತನಾಡಬೇಕಿದೆ. ಅದರಲ್ಲೂ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರ ಬಣದಲ್ಲಿ ಗುರುತಿಸಿಕೊಂಡಿರುವ ಶಾಸಕರು, ಸಚಿವರು ಮತ್ತು ಪ್ರಭಾವಿ ನಾಯಕರ ಮಾತುಗಳು ವ್ಯಾಪಕ ಪರಿಣಾಮ ಬೀರುತ್ತವೆ. ರಾಜ್ಯ ಸರ್ಕಾರಕ್ಕೆ ಸಾವಿರ ದಿನಗಳು ತುಂಬಿದ ಸಂದರ್ಭದಲ್ಲಿ ಹಾವೇರಿಯಲ್ಲಿ ಇಂದು ರಾಜ್ಯ ಸರ್ಕಾರದ ವತಿಯಿಂದ ಭೂ ಸಮರ್ಪಣಾ ಗ್ಯಾರಂಟಿ ಸಮಾವೇಶ ಹಾಗೂ ಜನಸೇವೆಯಲ್ಲಿ ಸಾರ್ಥಕ ಸಾವಿರ ದಿನ, ಒಂದು ಲಕ್ಷ ಕುಟುಂಬಗಳಿಗೆ ಹಕ್ಕು ಪತ್ರ ವಿತರಣಾ ಕಾರ್ಯಕ್ರಮ ನಡೆಯಿತು.

ಬೆಳಗ್ಗೆ 10.30ಕ್ಕೆ ಆರಂಭವಾಗಬೇಕಿದ್ದ ಪ್ರಾರಂಭ ಕಾರ್ಯಕ್ರಮ 12 ಗಂಟೆಯಾದರೂ ಶುರುವಾಗಿರಲಿಲ್ಲ. ಆರಂಭದಲ್ಲಿ ಕಂದಾಯ ಸಚಿವ ಕೃಷ್ಣಭೈರೇಗೌಡ ಕಾರ್ಯಕ್ರಮಕ್ಕೆ ಎಲ್ಲರನ್ನು ಸ್ವಾಗತಿಸಿದರು. ಕೆಲವು ಸಾಂಸ್ಕೃತಿಕ ಕಾರ್ಯಕ್ರಮಗಳ ನಡುವೆ ಕೊಪ್ಪಳ ಕ್ಷೇತ್ರದ ಶಾಸಕ ರಾಘವೇಂದ್ರ ಹಿಟ್ನಾಳ್ ಮಾತನಾಡಿದರು. ಈಹಂತದಲ್ಲಿ ಕಾರ್ಯಕ್ರಮಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಾಗಲಿ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸೇರಿದಂತೆ ಪ್ರಮುಖ ಸಚಿವರು ಹಾಜರಿರಲಿಲ್ಲ.

ಗೃಹ ಸಚಿವ ಪರಮೇಶ್ವರ್ ಎಲ್ಲರಿಗಿಂತ ಮೊದಲು ಬಂದಿದ್ದರು. ಔಪಚಾರಿಕವಾಗಿ ಸ್ವಾಗತ ಕೋರುವಾಗ ರಾಘವೇಂದ್ರ ಹಿಟ್ನಾಳ್ ಅವರು ಪರಮೇಶ್ವರ್ ಅವರನ್ನು ಕುರಿತು ಹಿರಿಯ ಸಚಿವರು ಮಾರ್ಗದರ್ಶಕರು ಹಾಗೂ ಮುಂದೆ ನಾಡಿನ ಮುಖಂಡರಾಗಲಿರುವ ಡಾ.ಜಿ.ಪರಮೇಶ್ವರ್ ಅವರಿಗೆ ಸ್ವಾಗತ ಎಂದು ಸಂಬೋಧಿಸಿದರು.

ರಾಜ್ಯದಲ್ಲಿ ನಾಯಕತ್ವ ಬದಲಾವಣೆಯಾಗಬೇಕು ಎಂದು ಉಪಮುಖ್ಯಮಂತ್ರಿ, ಡಿ.ಕೆ.ಶಿವಕುಮಾರ್ ಮತ್ತು ಅವರ ಬೆಂಬಲಿಗರು ನಿರಂತರ ಪ್ರಯತ್ನ ನಡೆಸುತ್ತಿದ್ದಾರೆ. ಇದಕ್ಕೆ ಪ್ರತಿಯಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಬೆಂಬಲಿಗರು ನಾನಾ ರೀತಿಯ ತಂತ್ರಗಾರಿಕೆಗಳನ್ನು ರೂಪಿಸುತ್ತಿದ್ದಾರೆ. ಒಂದು ವೇಳೆ ಸಿದ್ದರಾಮಯ್ಯ ಅವರ ಬದಲಾವಣೆಯಾದರೆ ದಲಿತ ಸಮುದಾಯಕ್ಕೆ ಸೇರಿದ ನಾಯಕರನ್ನು ಮುಖ್ಯಮಂತ್ರಿಯನ್ನಾಗಿ ಮಾಡಬೇಕು ಎಂದು ಪರ್ಯಾಯ ತಂತ್ರಗಾರಿಕೆಯನ್ನು ಮುಂದಿಟ್ಟಿದೆ. ದಲಿತ ಸಮುದಾಯದ ನಾಯಕರಲ್ಲಿ ಪರಮೇಶ್ವರ್ ಮುಂಚೂಣಿಯಲ್ಲಿದ್ದಾರೆ. ಇದು ಡಿಕೆ ಶಿವಕುಮಾರ್ ಅವರ ಬಣಕ್ಕೆ ಮಾಸ್ಟರ್ ಸ್ಟ್ರೋಕ್ ನೀಡಿದಂತಾಗಿದೆ.

ರಾಘವೇಂದ್ರ ಹಿಟ್ನಾಳ್ ಅವರು ಸಿದ್ದರಾಮಯ್ಯ ಪರಮಾಪ್ತ ಬಣದಲ್ಲಿ ಗುರುತಿಸಿಕೊಂಡಿದ್ದಾರೆ. ಬಾಕಿ ಇರುವ ಅವಧಿಗೂ ಸಿದ್ದರಾಮಯ್ಯ ಅವರೇ ಮುಖ್ಯಮಂತ್ರಿಯಾಗಿ ಮುಂದುವರೆಯಬೇಕು ಎಂಬುದು ಪ್ರತಿತಂತ್ರದ ಪ್ರಮುಖ ಬೇಡಿಕೆಯಾಗಿದೆ. ಖುದ್ದು ರಾಘವೇಂದ್ರ ಹಿಟ್ನಾಳ್ ಅವರೇ ಪರಮೇಶ್ವರ್ ಅವರನ್ನು ಮುಂದಿನ ನಾಯಕರಾಗುವವರು ಎಂದು ಹೇಳುವ ಮೂಲಕ ಹೊಸ ಆಯಾಮ ನೀಡಿದ್ದಾರೆ.

ಪರಮೇಶ್ವರ್ ಮತ್ತು ಡಿ.ಕೆ.ಶಿವಕುಮಾರ್ ಒಂದು ಕಾಲದಲ್ಲಿ ಪರಮಾಪ್ತ ಸ್ನೇಹಿತರಾಗಿದ್ದರು. ಆದರೆ ಪರಮೇಶ್ವರ್ ಉಪಮುಖ್ಯಮಂತ್ರಿಯಾಗಲು ಡಿ.ಕೆ.ಶಿವಕುಮಾರ್ ಅಡ್ಡಿ ಪಡಿಸಿದ್ದಾರೆ ಎಂಬ ವದಂತಿಗಳಿವೆ. ಈ ಹಿನ್ನೆಲೆಯಲ್ಲಿ ಪರಮೇಶ್ವರ್ ಅವರು ಸಿದ್ದರಾಮಯ್ಯ ಗುಂಪಿಗೆ ನೆಗೆದಿದ್ದರು.

ಪರಮೇಶ್ವರ್ ಕೂಡ ಎಂಟು ವರ್ಷಗಳ ಕಾಲ ಕೆಪಿಸಿಸಿ ಅಧ್ಯಕ್ಷರಾಗಿ ಕೆಲಸ ಮಾಡಿದ್ದರು. ಅವರ ನೇತೃತ್ವದಲ್ಲಿ 2013ರಲ್ಲಿ ರಾಜ್ಯ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬಂದಿತ್ತು. ಆದರೆ ಆ ಸಂದರ್ಭದಲ್ಲಿ ಪರಮೇಶ್ವರ್ ಕೊರಟಗೆರೆ ವಿಧಾನಸಭಾ ಕ್ಷೇತ್ರದಲ್ಲಿ ಸೋಲು ಕಂಡಿದ್ದರಿಂದ ಮುಖ್ಯಮಂತ್ರಿ ಹುದ್ದೆಯ ಹೈಪೋಟಿಯಿಂದ ಹೊರಗುಳಿದಿದ್ದರು.

ನಂತರದಲ್ಲಿ ಡಿ.ಕೆ.ಶಿವಕುಮಾರ್ ಪಕ್ಷದ ಅಧ್ಯಕ್ಷರಾದರು. ನಾನಾ ರೀತಿಯ ಸಂಘಟನಾತ್ಮಕ ಚಟುವಟಿಕೆಗಳ ಮೂಲಕ ಕಾಂಗ್ರೆಸ್ ಅನ್ನು ಮರಳಿ ಅಧಿಕಾರ ಹಿಡಿಯುವಂತೆ ಮಾಡುವಲ್ಲಿ ಪ್ರಮುಖರಾಗಿದ್ದಾರೆ. ಅದೇ ಹಕ್ಕಿನ ಪ್ರತಿಪಾದನೆಯನ್ನು ಡಿಕೆ ಶಿವಕುಮಾರ್ ಮಾಡುತ್ತಿದ್ದಾರೆ. ಈ ನಡುವೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಅಧಿಕಾರ ಬಿಟ್ಟುಕೊಡಲು ಸಿದ್ದರಿಲ್ಲ ಎಂಬ ಸಂದೇಶ ರವಾನಿಸಿದ್ದಾರೆ. ಈ ಜಿದ್ದಾಜಿದ್ದಿನ ನಡುವೆ ಪರಮೇಶ್ವರ್ ಹೆಸರು ನುಸುಳಿ ಬರುತ್ತಿದೆ.

ಮೂರ್ನಾಲ್ಕು ತಿಂಗಳಲ್ಲಿ ಜಾತಿಗಣತಿ ವರದಿ ಸಲ್ಲಿಕೆ : ಸಿದ್ದರಾಮಯ್ಯ

ಬೆಂಗಳೂರು, ಫೆ.14- ನಾಯಕತ್ವದ ಬದಲಾವಣೆಯ ಬಗ್ಗೆ ಹೈಕಮಾಂಡ್ ಈವರೆಗೂ ಯಾವುದೇ ಹೇಳಿಕೆ ನೀಡಿಲ್ಲ ಎಂದ ಮೇಲೆ ಅದರ ಬಗ್ಗೆ ಚರ್ಚೆ ಮಾಡುವ ಅಗತ್ಯವೇ ಇಲ್ಲ. ರಾಜ್ಯದ ನಾಯಕರು ನೀಡುವ ಹೇಳಿಕೆಗಳಿಗೆಲ್ಲಾ ಉತ್ತರ ನೀಡುವುದಿಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ವದ್ಧಂತಿಗಳನ್ನು ತಳ್ಳಿ ಹಾಕಿದ್ದಾರೆ.

ಹಾವೇರಿಯಲ್ಲಿಂದು ಸುದ್ದಿಗಾರರೊಂದಿಗೆ ಮಾತನಾಡಿರುವ ಅವರು, ನಾಯಕತ್ವ ವಿಚಾರಕ್ಕೆ ಸಂಬಂಧಪಟ್ಟಂತೆ ಪದೇ ಪದೇ ಪ್ರಶ್ನೆ ಕೇಳಬೇಡಿ ಅದಕ್ಕೆ ನಾನು ಉತ್ತರ ನೀಡುವುದಿಲ್ಲ ಎಂದರು. ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಶ್ರಮಕ್ಕೆ ತಕ್ಕ ಫಲ ಸಿಗುತದೆ ಎಂದು ಹೇಳಿರುವುದಕ್ಕೆ ಹಾಗೂ ಐದು ವರ್ಷ ಕಾಲ ತಮ ತಂದೆಯವರೆ ಮುಖ್ಯಮಂತ್ರಿಯಾಗಿ ಮುಂದುವರೆ ಯುತ್ತಾರೆ ಎಂದು ಡಾ.ಯತೀಂದ್ರ ಸಿದ್ದರಾಮಯ್ಯ ಪುನರುಚ್ಚರಿಸಿರುವುದಕ್ಕೆ ಸಂಬಂಧಪಟ್ಟಂತೆ ಪದೇ ಪದೇ ಪ್ರಶ್ನೆಗಳು ಎದುರಾದಾಗ ಸಿದ್ದರಾಮಯ್ಯ ಸಿಡಿಮಿಡಿಯಾದರು.

ಹೈಕಮಾಂಡ್ ಹೇಳಿದಂತೆ ನಡೆದುಕೊಳ್ಳುತ್ತೇನೆ ಎಂದು ನಾನು ಈಗಾಗಲೇ ಹೇಳಿದ್ದೇನೆ. ರಾಜ್ಯದ ಎಲ್ಲಾ ನಾಯಕರು ಹೈಕಮಾಂಡ್ ಹೇಳಿದಂತೆ ನಡೆದುಕೊಳ್ಳಬೇಕು ಎಂದರು.

ಅಧಿಕಾರ ಹಂಚಿಕೆಗೆ ಸಂಬಂಧಪಟ್ಟಂತೆ ಯಾರು ಏನು ಹೇಳಿದ್ದಾರೆ ಎಂಬುದು ಮುಖ್ಯ ಅಲ್ಲ. ಹೈಕಮಾಂಡ್ ನಾಯಕರು ಏನಾದರೂ ಹೇಳಿದ್ದಾರೆಯೇ ? ಹೇಳಿಲ್ಲ ಎಂದಾದ ಮೇಲೆ ಅದನ್ನು ಬಿಟ್ಟು ಬಿಡಿ. ಸ್ಥಳೀಯ ನಾಯಕರು ನೀಡಿರುವ ಹೇಳಿಕೆಗಳಿಗೆಲ್ಲಾ ನಾನು ಉತ್ತರ ಕೊಡುವುದಿಲ್ಲ ಎಂದರು. ಅಧಿಕಾರ ಹಂಚಿಕೆ ಸಂಬಂಧಪಟ್ಟಂತೆ ಮಾತುಕತೆಗಾಗಿ ಹೈಕಮಾಂಡ್ ತಮಗೆ ಆಹ್ವಾನ ನೀಡಿದರೆ, ನಾನು ದೆಹಲಿಗೆ ಹೋಗುತ್ತೇನೆ. ಆದರೆ ಯಾವ ದಿನದಂದು ಕರೆಯುತ್ತಾರೆ ಎಂಬ ಬಗ್ಗೆ ನನಗೆ ಗೊತ್ತಿಲ್ಲ ಎಂದರು.

ಫೆ.20 ರಂದು ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆಗಳ ಉತ್ಸವ : ಎಸ್ ಆರ್ ಪಾಟೀಲ



ಬಾಗಲಕೋಟೆ,ಫೆ.14-

ಇದೇ ಫೆಬ್ರುವರಿ 20 ರಂದು ನವನಗರದ ಕಲಾಭವನದಲ್ಲಿ ಜಿಲ್ಲಾ ಮಟ್ಟದ ಪಂಚ ಗ್ಯಾರಂಟಿ ಯೋಜನೆಗಳ ಉತ್ಸವ/ಕಾರ್ಯಗಾರ ಆಯೋಜಿಸಲಾಗುವುದು ಎಂದು ಕರ್ನಾಟಕ ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಉಪಾಧ್ಯಕ್ಷ ಎಸ್ ಆರ್ ಪಾಟೀಲ (ಬ್ಯಾಡಗಿ) ಹೇಳಿದರು.

ಜಿಲ್ಲಾ ಪಂಚಾಯತ್ ನೂತನ ಸಭಾಂಗಣದಲ್ಲಿ ಶುಕ್ರವಾರ ಸಂಜೆ ಜರುಗಿದ ಜಿಲ್ಲಾ ಪಂಚ ಗ್ಯಾರಂಟಿ ಯೋಜನೆಗಳ ಉತ್ಸವ/ಕಾರ್ಯಗಾರ ಕುರಿತ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು ಪಂಚ ಗ್ಯಾರಂಟಿ ಯೋಜನೆಗಳ ಜಿಲ್ಲಾ ಮಟ್ಟದ ಉತ್ಸವವನ್ನು ಅತ್ಯಂತ್ಯ ಸಂಭ್ರಮದಿಂದ ಇತರೆ ಜಿಲ್ಲೆಗಳಿಗೆ ಮಾಧರಿಯಾಗುವಂತೆ ಆಚರಿಸಿ ಯಶಸ್ವಿಗೊಳಿಸಬೇಕಾದ್ದು ಎಲ್ಲರ ಜವಾಬ್ದಾರಿಯಾಗಿದೆ. ಈ ಹಿನ್ನೆಯಲ್ಲಿ ಇಂದು ನವನಗರದ ಕಲಾಭವನಕ್ಕೆ ಭೇಟಿ ನೀಡಿ ಸ್ಥಳ ಪರಿಶೀಸಲಾಗಿದ್ದು ಸ್ಥಳವು ಸೂಕ್ತವಾಗಿರುತ್ತದೆ.

ವಿವಿಧ ಇಲಾಖೆ ಅಧಿಕಾರಿಗಳೊಂದಿಗೆ ಗ್ಯಾರಂಟಿ ಯೋಜನೆಗಳ ಪ್ರಾಧಿಕಾರದ ಜಿಲ್ಲಾ ಹಾಗೂ ತಾಲೂಕು ಅಧ್ಯಕ್ಷರು, ಉಪಾಧ್ಯಕ್ಷಕರು ಮತ್ತು ಸದಸ್ಯರು ಸಹಕಾರ ನೀಡಿ ಸರಕಾರದ ಈ ಪಂಚ ಗ್ಯಾರಂಟಿ ಯೋಜನೆಗಳನ್ನು ಇನ್ನೂ ಹೆಚ್ಚಿನ ಮಟ್ಟದಲ್ಲಿ ಪ್ರಚಾರ ಮಾಡಿ ಯಶಸ್ವಿಗೊಳಿಸಬೇಕಾಗಿದೆ ಎಂದರು.

ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆಗಳ ಉತ್ಸವಕ್ಕೆ ಕನಿಷ್ಠ ಮೂರು ಸಾವಿರ ಫಲಾನುಭವಿಗಳು ಆಗಮಿಸುವ ನೀರಿಕ್ಷೆ ಇದ್ದು, ಈ ಕಾರ್ಯಕ್ರಮದಲ್ಲಿ ಎಲ್ಲೂ ಲೋಪದೋಷಗಳು ಉಂಟಾಗದಂತೆ ಅಚ್ಚುಕಟ್ಟಾಗಿ ಆಯೋಜಿಸಬೇಕು. ಪ್ರತಿ ತಾಲೂಕು ಹಾಗೂ ಗ್ರಾಮ ಪಂಚಾಯಿತಿಯಿಂದ ಫಲಾನುಭವಿಗಳು ಆಗಮಿಸುವದರಿಂದ ಅವರು ಸುರಕ್ಷಿತವಾಗಿ ಬಂದು ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾಹಿತಿ ಪಡೆದು ಮತ್ತೆ ನಿಗದಿತ ಸಮಯಕ್ಕೆ ಸುರಕ್ಷಿತವಾಗಿ ಮರಳುವಂತಾಗಬೇಕು. ಈ ನಿಟ್ಟಿನಲ್ಲಿ ಸಮಿತಿಗಳನ್ನು ರಚಿಸಿಕೊಂಡು ವ್ಯವಸ್ಥಿತವಾಗಿ ಕೆಲಸ ಮಾಡಬೇಕು. ಮಹಿಳೆಯರ ಸಬಲೀಕರಣಕ್ಕೆ ಪಂಚ್ ಗ್ಯಾರಂಟಿ ಯೋಜನೆಗಳು ಸಾಕಷ್ಟು ಸಹಕಾರ ನೀಡಿವೆ . ಆದ್ದರಿಂದ ಹೆಚ್ಚಿನ ಸಂಖ್ಯೆಯಲ್ಲಿ ಮಹಿಳಾ ಫಲಾನುಭವಿಗಳೇ ಭಾಗವಹಿಸುವರು. ಅವರಿಗೆ ಇನ್ನೂ ಸ್ಪೂರ್ತಿ ನೀಡಲು ಅವರು ತಮ್ಮ ಯಶೋಗಾಥೆಗಳನ್ನು ಹೇಳಲು ಅವಕಾಶ ನೀಡಬೇಕು. ಐದು ಗ್ಯಾರಂಟಿ ಯೋಜನೆಗಳ ಪ್ರತ್ಯೇಕ ಮಾಹಿತಿ ಮಳಿಗೆಗಳನ್ನು ತೆರೆದು, ಗ್ಯಾರಂಟಿ ಯೋಜನೆಗಳ ಮಾಹಿತಿ ನೀಡುವ ಜನಪದ ಗಾಯನ ನೃತ್ಯ ಗಳ ಮೂಲಕ ಜನರನ್ನು ಆಕರ್ಷಿಸಿ ಉತ್ಸವವನ್ನು ಹಮ್ಮಿಕೊಳ್ಳಬೇಕು ಎಂದು ತಿಳಿಸಿದರು.

ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಅನೀಲ ದಿಡ್ಡಿ ಮಾತನಾಡಿ ಕಾರ್ಯಕ್ರಮಕ್ಕೆ ಜಿಲ್ಲಾ ಉಸ್ತುವಾರಿ ಸಚಿವರು ಹಾಗೂ ಜನಪ್ರತಿನಿಧಿಗಳು ಆಗಮಿಸುವರಿದ್ದು, ಶಿಷ್ಟಾಚಾರದನ್ವಯ ಆಮಂತ್ರಣ ಪತ್ರಿಕೆ, ವೇದಿಕೆ ವ್ಯವಸ್ಥೆ, ಫಲಾನುಭವಿಗಳೊಂದಿಗೆ ಚರ್ಚೆ ಮತ್ತು ಉಟೋಪಚಾರದ ವ್ಯವಸ್ಥೆ ಸೇರಿ ಎಲ್ಲವೂ ಅಚ್ಚುಕಟ್ಟಾಗಿ ನಡೆಯಬೇಕು ಎಂದು ಹೇಳಿದರು.

ಸಭೆಯಲ್ಲಿ ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ಉಪಾಧ್ಯಕ್ಷರು, ಸದಸ್ಯರು ಹಾಗೂ ಜಿಲ್ಲಾ ಪಂಚಾಯತ್ ಯೋಜನಾ ನಿರ್ದೇಶಕ ಶಾಮಸುಂದರ ಕಾಂಬಳೆ ಸೇರಿದಂತೆ ಇತರರು ಇದ್ದರು.

ಪ್ರೀತಿ ಅಂದ್ರೆ ಏನು? ಮೈ ಮುಟ್ಟುವುದಾ? ಮುಟ್ಟಿಸಿಕೊಳ್ಳುವುದಾ?

ಮೈ ಮಟ್ಟಿದವರು, ಮನಸು ಮುಟ್ಟಲಿಲ್ಲ
ಮನಸು ಮುಟ್ಟಿದವರು,ಮೈ ಮುಟ್ಟಲಿಲ್ಲ
:- ದೇವರಾಜ್ ಜಿ.ಸಿ. ಘಂಟಿ

ಮೊದಲಿಂತೆ ಇರದ ಮನಸು, ಕಳೆದುಕೊಂಡವರ ನಿರಾಶೆ,ಬೇಕೆನುವ ಹಂಬಲಕ್ಕೆ ತೀರಿಸಿಕೊಂಡ ಆಸೆ.ಆಸೆಗೆ ಬಲಿಯಾಗದೆ ಶರಣಾದ ನಿಜ ಪ್ರೀತಿ,ನಿಲ್ಲದ ನಿರೀಕ್ಷೆಗಳ ಸಾಲು ಸಾಲು ಸುಳ್ಳು-ಪೊಳ್ಳು, ಉಡುಗೊರೆ ಹಠವಿಡಿದು ಪಡೆದ ಮುತ್ತು,ಅವನಿರದೆ/ಅವಳಿರದೆ ಕಂಡ ನರಕ.ಬೆಂದ ಬಾಂಡಲಿಗೆ ಬಿದ್ದ ಮಿರ್ಚಿ ಹೃದಯ ಒಂದಾ? ಎರಡಾ? ಎನ್ನುವ ಸರಿ ಉತ್ತರ ಸಿಗದೆ ಪೇಚಾಡಿಸುತ್ತವೆ.ಮೇಲಿನ ಸಾಲಿಗಳಲ್ಲಿ ಜೀವತೆತ್ತ ನೋವಿನ ರಾಗ,ಒಂದೆಡೆ ಆಸೆಗೆ ಒಗ್ಗಿ,ಮತ್ತೊಂದೆಡೆ ದೂರಿಕರಿಸಿದ ಪ್ರೇಮದ ನೀವೆದನೆಯನ್ನು ಸಾರುತ್ತವೆ.ಕೊಂಕುಳಲ್ಲಿ ಇರುವ ಪ್ರಿಯಕರನ ಕೈ ಮತ್ತೊಬ್ಬಳ ಕಿರು ಬೆರಳಿಗೆ ಜೊತೆಯಾದದ್ದು ಮನದ ದಿಗಿಲಿನಲ್ಲಿ ಮೈ ಮುಟ್ಟಿದವರನ್ನು ಸುಟ್ಟುಕೊಳ್ಳುತ್ತಲೇ ಹೊಟ್ಟೆ ಪಾಡಿಗಾಗಿ ಪರಿತಪಿಸುವುದನ್ನು ಕವಿ ಚಿತ್ರಿಸಿದ್ದಾರೆ. ಅರೇ! ಏನೀ ವಿಷಯ ಅಂತ ಯೋಚಿಸ್ತಾ ಇದಿರಾ?! ಇಂದು ಪ್ರೀತಿಯ ದಿನ.ಅಂತರಳದಲ್ಲಿ ಅರಳಿದ ಹೂವಿಗೆ ಖುಷಿಯ ಪನ್ನೀರು ಹಾಕಿದವರು ತಮ್ಮ ವರಿಗಾಗಿ ಅಂಗಲಾಚಿ ....ಅಂತ ಹೇಳಿ ಹೃದಯ ಒಪ್ಪಿಸಿದ ಕ್ಷಣವಂತೆ.ಪ್ರೇಮ ಕಳೆದುಕೊಂಡು ಹೋಗುವ ಶೀಲವಲ್ಲ.ಚಿನ್ನದಂತ ಹೃದಯದಲ್ಲಿ ನಿತ್ಯ ಶೋಭಿಸುವ ವಜ್ರದ ಗಣಿಯೇ ಪ್ರೀತಿ. ಇಷ್ಟಕ್ಕೂ ಪ್ರೀತಿ ಅಂದ್ರೆ ಏನೂ? ಅನ್ನುವ ಹುಡುಕಾಟ ಶುರು ಮಾಡಿದರೆ ಉತ್ತರ ಸಿಗುವುದು ಕಷ್ಟ ಸಾಧ್ಯ ನೋಡಿ.ಗುಲಾಬಿ ನೀಡುತ್ತಿದ ಕೈಗಳಿಗೆ ಮೊಬೈಲ್ ಬಂದು.ಸ್ಟಿಕ್ಕರ್ ಗಿಫ್ಟ್ ತಲುಪಿರುವ ಇಂದಿನ ಪ್ರೀತಿಗೆ ನೋ ವ್ಯಾಲಿಡಿಟಿ ಅಂತ ನನ್ನ ಭಾವನೆ. ಕಾಲೇಜು ತುಂಟ ಹುಡುಗ/ಹುಡುಗಿಯರ ಪಾಲಿಗೆ ಈ ದಿನ ಹಬ್ಬವೋ ಹಬ್ಬ! ಬಹುತೇಕ ಪ್ರೇಮ ಹೃದಯದಿಂದ ಹುಟ್ಟಿದರೆ,ಕೆಲವು ಕಣ್ಣೀರ ಜಲಪಾತದಲ್ಲಿ ಮುಳುಗಿ ಹೋಗಿರುತ್ತವೆ.ಯಾವುದು ನಿಜ ಪ್ರೀತಿ ಅಂತ ಪ್ರಶ್ನೆ ಎತ್ತಿದರೆ. ಲೈಲಾ ಮಜ್ನು,ರೋಮಿಯೋ ಜ್ಯೂಲಿಯಟ್ ಎನ್ನುವ ಉದಾಹರಣೆ ಕೊಡುತ್ತೇವೆ.ಇಲ್ಲಿ ಪರಸ್ಪರ ಹೃದಯ ಸ್ಪರ್ಶಿ ಭಾವಗಳಿದ್ದವು ಅದಕ್ಕೆ ಅಮರ ಪ್ರೇಮ ಹಾಗೆ ಉಳಿಯಿತು.ಇನ್ನು ಅಂತರಂಗ ಮುಟ್ಟಿದ ಪ್ರೇಮಕ್ಕೆ ಮತ್ತೊಂದು ಕತೆ ಎಂದರೆ ಹನ್ನೆರಡನೇ ಶತಮಾನದ ಅಕ್ಕ ಮಹಾದೇವಿ ಎನ್ನಬಹುದು.ಕಾಣುವ ದೈವಕ್ಕಿಂತ ಕಾಣದಿರುವ ನನ್ನ ಗಂಡನೆಂದರೆ ಚೆನ್ನಮಲ್ಲಿಕಾರ್ಜುನ ದೇವ ಎನ್ನುತ್ತಾಳೆ. ಪ್ರೀತಿಗೆ ನೂರಾರು ಕತೆ,ಕಾದಂಬರಿ ಓದಿ ತಿಳಿದುಕೊಂಡಿದ್ದೇವೆ. ಈಗ ನೋಡುತ್ತ ಇದ್ದೇವೆ.ಜಗತ್ತಿನಲ್ಲಿ ಎಲ್ಲಾ ಪ್ರೇಮದ ಕೊನೆಯ ಹಂತವೇ ಕಾರುಣ್ಯ.ಮತ್ತೊಂದು ಹೃದಯವನ್ನು ನೋಯಿಸದ ಹಾಗೆ ಬೆಚ್ಚಗಿನ ಗೂಡಿನೊಳಗೆ ಕಾಯ್ದಿರಿಸಿಕೊಳ್ಳುವ ನಂದಾದೀಪವೇ ಪ್ರೀತಿ.



ಸಿನಿಮಾ ಥೇಯೆಟ್ರಲ್ಲೊ,ಬಾಲ್ಕಾನಿಯ ಮಗ್ಗುಲ್ಲೊ,ಗಿಡದ ಮರೆಯಲ್ಲೊ ಮುಗಿಯುವ ತೃಷೆಯಲ್ಲ. ಕಾಮವ ಹೊರೆತು ಪಡಿಸಿ ಕಾಯುವ ಕವಚ ಪ್ರೀತಿ.

ಮಾರಾಟಕ್ಕಿದ್ದ ಅದೆಷ್ಟೊ
ಕನಸ್ಸು ಗಳು ಮನದ ಮಾರ್ಕೆಟ್ ನಲ್ಲಿ ಕೊಳೆತು ಹೋದವು
ಅವಳು ಬರಲಿಲ್ಲ
:-ಅಭಿಷೇಕ್ ಸ್ವಾಮಿ ಹೊಸಮಠ

ಅವರ ಕವಿತೆಗಳು ಅಕ್ಷರಸಹ ಮನದ ಬಾಗಿಲು ಮುಟ್ಟಿ,ಕಣ್ಣಲ್ಲಿ ಝರಿ ಹರಿಸುತ್ತವೆ.ಪ್ರೀತಿಯು ದುಬಾರಿಯ ವಸ್ತುವಲ್ಲ,ಕಳಪೆಯಾದ ಕಬ್ಬಿಣವೂ ಅಲ್ಲ ಅದು ಮೃದು ಮಲ್ಲಿಗೆಯ ಗಮಲು, ಗಂಧದ ಕೊರಡು. ಇಲ್ಲಿ ಜೀವಿಸಲು ಇರುವ ಪರಮ ಅಧಿಕಾರ ಹೃದಯವನ್ನು ಅರಿತವರಿಗೆ ಎನ್ನುವ ಮಾತು ಸತ್ಯವಾಗುತ್ತದೆ.ಆಧುನಿಕತೆಯ ಬರದಲ್ಲಿ ಪ್ರೀತಿಯಲ್ಲಿ ಬಿದ್ದು ಜೀವನ ರೂಪಿಸಿಕೊಂಡವರಿಗಿಂತ ಪ್ರಾಣ ಕಳೆದುಕೊಂಡವರ ಕತೆಗಳು ಸಾವಿರ ಸಾವಿರ.ಕಾರಣ ಧರ್ಮದ ಅಮಲು.ಜೀವನ ಅಂದ್ರೆ ಎಷ್ಟೊ ಜನರ ಪಾಲಿಗೆ ಅದು ಕೂಲಿಂಗ್ ಗ್ಲಾಸ್ ತರ,ಐಸ್ ಕ್ರೀಮ್ ತರ,ಪಡ್ಡೆ ಹುಡುಗರ,ಹುಡುಗಿಯರ ಕನಸುಗಳಿಗೆ ಪಾರವೇ ಇರುವುದಿಲ್ಲ.ಒಂಥರ ವಸಂತದ ಚಿಗುರಿನ ಹಾಗೆ ಚಿಗುರೊಡೆಯುವ ಆಸಗಳು ಎಲ್ಲವನ್ನ ಮರೆಯಿಸಿ ಬಿಡುತ್ತವೆ.ನೂರಾರು ಪ್ರೇಮ ನೀವೆದನೆ,ನೊಂದ ಸಾವಿರ ಹೃದಯಗಳ ಕೂಗನ್ನು ಕೇಳದೆ ಕಿವುಡಾದ ಮೂಕ ವೇದನೆಯೆ ಪ್ರೀತಿ ಇರಬೇಕು.ಕಮರಿದ ಬದುಕಿಗೆ ಹೊಸ ದಾರಿ ಕೊರೆಯಲು ಅವಕಾಶ ಕೊಡದ ಪ್ರೇಮಕ್ಕೆ ಬಲಿಯಾದವರ ಪಟ್ಟಿ ನೆನೆದರೂ ಸಾಕಾಗದಷ್ಟು ಇತಿಹಾಸ ಇದೆ.ಇಷ್ಟುಕ್ಕೂ ಅದೃಷ್ಟ ಬೇಕು ಕಣೊ ಅದೃಷ್ಟ ಇರಬೇಕು ಕಣೆ ಅನ್ನೊ ನೆಪ ಹೇಳಿ ದೂರವಾಗುವ ಪ್ರೀತಿ ದೇಹದ ಸುಖಕ್ಕಾಗಿ ಅಲ್ಲ ಎಂಬುದನ್ನು ಅರಿಯಿರಿ.ತಿಳಿಸಿಸಿರಿ. ಜೀವನವನ್ನು ಕಳೆದುಕೊಳ್ಳದೆ ಆನಂದಿಸಿರಿ.ಪ್ರತಿ ಪ್ರೀತಿಯ ಹಸಿವು ಇನ್ನೊಬ್ಬರ ಬೆರವರಿನ ಫಲವಲ್ಲ. ನಮ್ಮ ಹೃದಯದಿ ಬತ್ತಿದ ಹಣತೆಯಲಿ ಜನಿಸಿದ ತುತ್ತು ಅನ್ನ ಎನ್ನುವುದ ಮರೆಯದಿರಿ.ಮತ್ತೊಮ್ಮೆ ಪ್ರೇಮಿಗಳ ದಿನಾಚಾರಣೆಯ ಶುಭಾಷಯಗಳು.

:- ರವಿ ರಾಯಚೂರಕರ್ ದೇವದುರ್ಗ

ನಿಮ್ಮೂರು ಸುದ್ದಿ

ಸಂಪಾದಕೀಯ

ಖರ್ಗೆ ಭಾಷಣ ಕಿತ್ತು ಹಾಕಿದ್ದು ಖಂಡನೀಯ; ಅಂದು ದ್ರೋಣಾಚಾರ್ಯ, ಇಂದು ಸಂಘಾಚಾರ್ಯ!



ಸಂಸದೀಯ ಪ್ರಜಾಪ್ರಭುತ್ವದಲ್ಲಿ ಭಿನ್ನಾಭಿಪ್ರಾಯ, ವಿರೋಧ, ಸಲಹೆಗಳಿಗೆ ಮುಕ್ತ ಅವಕಾಶವಿದೆ. ಆದರೆ, ಮೋದಿ ಸರ್ಕಾರವು ಸಂಸದೀಯ ವ್ಯವಸ್ಥೆಯನ್ನು ತನ್ನ ಸ್ವೇಚ್ಛೆಗೆ ತಕ್ಕಂತೆ ಬಗ್ಗಿಸಿಕೊಂಡು ವಿಕೃತಗೊಳಿಸುತ್ತಿದೆ. ಸಂಸತ್ತಿನ ಕಾರ್ಯ-ಕಲಾಪಗಳನ್ನು ನಡೆಸುವವರನ್ನು ಕೈಗೊಂಬೆ ಮಾಡಿಕೊಂಡಿದೆ.

ಸಂಸತ್‌ನಲ್ಲಿ ಕೇಂದ್ರ ಬಜೆಟ್ ಅಧಿವೇಶನದ ಮೊದಲ ಹಂತದ ಕಲಾಪ ಮುಗಿದಿದೆ. ಕಲಾಪದಲ್ಲಿ ರಾಷ್ಟ್ರಪತಿ ಭಾಷಣಕ್ಕೆ ಧನ್ಯವಾದ ಸೂಚನೆ ಮತ್ತು ಚರ್ಚೆಗಳು ನಡೆದಿವೆ. ಫೆಬ್ರವರಿ 4ರಂದು ರಾಜ್ಯಸಭೆಯಲ್ಲಿ ವಿಪಕ್ಷ ನಾಯಕ, ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ರಾಷ್ಟ್ರಪತಿ ಭಾಷಣಕ್ಕೆ ಪ್ರತಿಕ್ರಿಯಿಸಿದ್ದರು. ಸರ್ಕಾರದ ಕೆಲವು ನೀತಿಗಳ ವಿಮರ್ಶೆ, ಸಂಸದೀಯ ಕಾರ್ಯವೈಖರಿ ಮತ್ತು ಇತರ ಮುಖ್ಯ ವಿಷಯಗಳನ್ನು ತಮ್ಮ ಮಾತಿನಲ್ಲಿ ಚರ್ಚಿಸಿದ್ದರು. ಆದರೆ, ಈಗ ಏಕಾಏಕಿ ಅವರ ಭಾಷಣದ ಬಹುಪಾಲು ಭಾಗವನ್ನು ರಾಜ್ಯಸಭಾ ಕಡತದಿಂದ ಕಿತ್ತುಹಾಕಲಾಗಿದೆ. ಯಾವುದೇ ಕಾರಣ ನೀಡದೆ ವಿನಾಕಾರಣ ತಮ್ಮ ಭಾಷಣದ ಭಾಗವನ್ನು ತೆಗೆದುಹಾಕಲಾಗಿದೆ ಎಂದು ಮಲ್ಲಿಕಾರ್ಜುನ ಖರ್ಗೆ ಆರೋಪಿಸಿದ್ದಾರೆ.

ಶುಕ್ರವಾರ, ರಾಜ್ಯಸಭೆಯ ಶೂನ್ಯವೇಳೆಯಲ್ಲಿ ಚರ್ಚಿಸಿರುವ ಖರ್ಗೆ, ತಮ್ಮ ಭಾಷಣದಲ್ಲಿ ಯಾವುದೇ ಅಸಭ್ಯ ಅಥವಾ ಅಸಂಸದೀಯ ಭಾಷೆಯನ್ನು ಬಳಸಿಲ್ಲ. ಎಲ್ಲವೂ ಸಂಸದೀಯ ಚರ್ಚೆಯ ವ್ಯಾಪ್ತಿಯೊಳಗಿತ್ತು. ಸರ್ಕಾರದ ನೀತಿಗಳ ವಿಮರ್ಶೆಯನ್ನು ಒಳಗೊಂಡಿತ್ತು ಇದು ವಿರೋಧ ಪಕ್ಷದ ನಾಯಕನ ಜವಾಬ್ದಾರಿ ಮತ್ತು ಹಕ್ಕು. ಆದರೆ, ನಮ್ಮ ಧ್ವನಿಯನ್ನು ಹತ್ತಿಕ್ಕುವ ಉದ್ದೇಶದಿಂದ ರಾಜಸಭೆಯ ಅಧಿಕೃತ ವೆಬ್‌ಸೈಟ್ ಸೇರಿದಂತೆ ಎಲ್ಲ ಕಡತಗಳಿಂದ ಕಿತ್ತುಹಾಕಲಾಗಿದೆ ಎಂದು ರಾಜ್ಯಸಭಾ ಅಧ್ಯಕ್ಷ, ಉಪರಾಷ್ಟ್ರಪತಿ ಸಿ.ಪಿ. ರಾಧಾಕೃಷ್ಣನ್ ಅವರ ಗಮನಕ್ಕೆ ತಂದಿದ್ದಾರೆ.

ಸಂವಿಧಾನದ ಅನುಚ್ಛೇದ 105(1)ರಲ್ಲಿ ಸಂಸದರಿಗೆ ಅಭಿವ್ಯಕ್ತಿ ಸ್ವಾತಂತ್ರ್ಯದ ಹಕ್ಕನ್ನು ಒದಗಿಸಲಾಗಿದೆ. 105(1) ವಿಧಿಯು ಸಂಸದರು ಸಂಸತ್ತಿನ ಕಾರ್ಯವಿಧಾನದ ನಿಯಮಗಳು ಮತ್ತು ಸ್ಥಾಯಿ ಆದೇಶಗಳಿಗೆ ಒಳಪಟ್ಟು, ಸಂಸತ್ತಿನಲ್ಲಿ ಭಾಷಣ ಮಾಡಬಹುದು. ಅವರು ಮಾತನಾಡುವಾಗ ಅಥವಾ ಮತ ನೀಡುವಾಗ ಅವರಿಗೆ ಸಂಪೂರ್ಣ ಭಾಷಣ ಸ್ವಾತಂತ್ರ್ಯವಿದೆ ಎಂದು ಹೇಳುತ್ತದೆ. ಸಂಸದೀಯ ಚರ್ಚೆಯಲ್ಲಿ ಯಾವುದೇ ವಿಷಯದ ಬಗ್ಗೆ ನಿರ್ಭಯವಾಗಿ ಅಭಿಪ್ರಾಯ ವ್ಯಕ್ತಪಡಿಸಲು ಅವಕಾಶ ನೀಡುತ್ತದೆ. ಮಿಗಿಲಾಗಿ, ಸಂಸದರ ಭಾಷಾ ಬಳಕೆಯು ಅಸಭ್ಯವಾಗಿದ್ದರೆ ಮಾತ್ರವೇ ಆ ಭಾಷಣವನ್ನು ಕಡತದಿಂದ ತೆಗೆದಲು ಸಂಸದೀಯ ಇಲಾಖೆಗೆ ಅವಕಾಶವನ್ನೂ ಸಂವಿಧಾನ ಒದಗಿಸಿದೆ.

ಆದರೆ, ಖರ್ಗೆ ಅವರು ತಮ್ಮ ಭಾಷಣದಲ್ಲಿ ಯಾವುದೇ ಅಸಭ್ಯ, ಅಸಂವಿಧಾನಿಕ ಅಥವಾ ಅಸಂಸದೀಯ ಭಾಷೆಯನ್ನು ಬಳಸಿಲ್ಲ. ಕಾರಣವಿಲ್ಲದೆ ಅವರ ಭಾಷಣವನ್ನು ಕಡತದಿಂದ ಕಿತ್ತು ಹಾಕಲಾಗಿದೆ. ಸರ್ಕಾರದ ವಿರುದ್ಧ ಖರ್ಗೆ ಅವರು ಮಾಡಿದ ಗಂಭೀರ ಆರೋಪಗಳು, ಬಿಚ್ಚಿಟ್ಟ ಸತ್ಯಗಳನ್ನು ದಾಖಲೆಗಳಿಂದ ಕಿತ್ತುಹಾಕಲು ಮೋದಿ ಸರ್ಕಾರ ಎಸಗಿರುವ ಕುತಂತ್ರದ ಕೃತ್ಯವೆಂದು ವಿಪಕ್ಷಗಳು ಆರೋಪಿಸಿವೆ. ಆದ್ದರಿಂದ, ತೆಗೆದುಹಾಕಲಾದ ಭಾಷಣದ ಭಾಗಗಳನ್ನು ಮರಳಿ ಸೇರಿಸಬೇಕೆಂದು ಖರ್ಗೆ ಸೇರಿದಂತೆ ವಿಪಕ್ಷಗಳ ನಾಯಕರು ಒತ್ತಾಯಿಸಿದ್ದಾರೆ.

ಆದಾಗ್ಯೂ, ವಿಪಕ್ಷಗಳ ಮನವಿಯನ್ನು ಸಭಾಕ್ಷರು ತಿರಸ್ಕರಿಸಿದ್ದಾರೆ. ಅಧ್ಯಕ್ಷರ ನಿರ್ಧಾರವನ್ನು ಪ್ರಶ್ನಿಸಲಾಗದು ಮತ್ತು ತೆಗೆದುಹಾಕಿದ ಭಾಗಗಳನ್ನು ಬಹಿರಂಗ ಪಡಿಸಲು ಸಾಧ್ಯವಿಲ್ಲವೆಂದು ಉಪರಾಷ್ಟ್ರಪತಿ ಸಿ.ಪಿ ರಾಧಾಕೃಷ್ಣನ್ ಸಮರ್ಥಿಸಿಕೊಂಡಿದ್ದಾರೆ.

ಈ ಏಪಕ್ಷೀಯ, ಸರ್ವಾಧಿಕಾರಿ, ಪಕ್ಷಪಾತಿ ಧೋರಣೆ ಮತ್ತು ನಿಲುವುಗಳು ಏನನ್ನು ಸೂಚಿಸುತ್ತವೆ? ಮೋದಿ ಸರ್ಕಾರದ ವಿರುದ್ಧ ಸದನದಲ್ಲಿಯೂ, ಸದನದ ಹೊರಗೂ ಮಾತನಾಡಲು ಅವಕಾಶವಿಲ್ಲ. ಮಾತನಾಡಿದರೆ, ಅಂತಹ ಮಾತುಗಳು ಎಲ್ಲಿಯೂ ಉಳಿಯುವುದಿಲ್ಲ. ಉಳಿಯಲು ಬಿಡುವುದಿಲ್ಲ ಎಂಬ ಸ್ಪಷ್ಟ ಲಜ್ಜೆಗೇಡಿತನದ ಪ್ರತಿಬಿಂಬವಾಗಿದೆ.

ಮಹಾಭಾರತದಲ್ಲಿ, ದ್ರೋಣಾಚಾರ್ಯನನ್ನು ಗುರುವಾಗಿ ಸ್ವೀಕರಿಸಿದ್ದ ದಲಿತ ಏಕಲವ್ಯ, ಆತನ ಪ್ರತಿಮೆಯನ್ನು ಇಟ್ಟುಕೊಂಡು ಬಿಲ್ವಿದ್ಯೆ ಕಲಿತ. ಆದರೆ, ಜಾತಿ ಅಹಂಕಾರವನ್ನು ತಲೆಗೇರಿಸಿಕೊಂಡಿದ್ದ ದ್ರೋಣಾಚಾರ್ಯ, ಪಾಂಡವರ ಮಾತಿಗೆ ಮಣಿದು, ಅರ್ಜುನನೇ ಧನುರ್ವಿದ್ಯೆಯಲ್ಲಿ ಸರ್ವಶ್ರೇಷ್ಠ ಎಂದು ಸಾರಲು, ತಾನು ವಿದ್ಯೆ ಕಲಿಸದೇ ಇದ್ದರೂ, ಏಕಲವ್ಯನ ಹೆಬ್ಬೆರಳನ್ನು ಗುರುದಕ್ಷಿಣೆಯಾಗಿ ಪಡೆದು, ಆದಿವಾಸಿಯೊಬ್ಬನ ಬಿಲ್ವಿದ್ಯೆಯನ್ನು ಕಸಿದುಕೊಳ್ಳುವ ಹೀನ ಮಟ್ಟಕ್ಕೆ ಇಳಿದರು. ಹೆಬ್ಬೆರಳನ್ನು ದಕ್ಷಿಣೆಯಾಗಿ ಕೊಟ್ಟ ಏಕಲವ್ಯ ಶಿಕ್ಷಣದ ಹಕ್ಕು ಕಳೆದುಕೊಂಡರು. ಬ್ರಾಹ್ಮಣ-ಕ್ಷತ್ರಿಯರ ಪಾರಮ್ಯ ಸ್ಥಾಪನೆಗಾಗಿ ನಡೆಸಲಾಗಿದ್ದ ಸಂಚು ಪುರಾಣ ಕಾಲದಷ್ಟು ಹಳೆಯದು.

ಇತಿಹಾಸದದ್ದಕ್ಕೂ ದಲಿತರ ಸ್ವಾತಂತ್ರ್ಯ ಮತ್ತು ಹಕ್ಕುಗಳನ್ನು ಕಸಿದುಕೊಳ್ಳುವುದು ಮುಂದುವರಿದೇ ಇದೆ. ದಲಿತರಿಗೆ ಪಾಠ ಹೇಳಿಕೊಡುತ್ತಿದ್ದ ಕಾರಣಕ್ಕಾಗಿ ಭಾರತದ ಮೊದಲ ಮಹಿಳಾ ಶಿಕ್ಷಕಿ ಸಾವಿತ್ರಿ ಬಾಯಿ ಫುಲೆ ಅವರ ಮೇಲೆ ಮೇಲ್ಜಾತಿಯ ದುರುಳರು ಸಗಣಿ ಎರಚಿದ್ದರು. ಇತ್ತೀಚಿನ ವರ್ಷಗಳಲ್ಲಿಯೂ, ದಲಿತ ವಿದ್ಯಾರ್ಥಿಗಳು ಉನ್ನತ ಶಿಕ್ಷಣ ಪಡೆಯದಂತೆ ತಡೆಯುವ, ಅವರ ದನಿಯನ್ನು ಹತ್ತಿಕ್ಕುವ ಸಾಂಸ್ಥಿಕ ಕೃತ್ಯಗಳೂ ನಡೆಯುತ್ತಿವೆ.

ಅಂದು, ದ್ರೋಣಾಚಾರ್ಯ ಏಕಲವ್ಯನ ಹೆಬ್ಬೆರಳಿಗೆ ಕೈಹಾಕಿದರೆ, ಇಂದು ಸಂಘಚಾರ್ಯರು (ಆರ್‌ಎಸ್‌ಎಸ್/ಬಿಜೆಪಿ) ದಲಿತರ ನಾಲಿಗೆಗೆ ಕೈ ಹಾಕಿದ್ದಾರೆ. ದಲಿತರ ದನಿಯನ್ನು ಹತ್ತಿಕ್ಕುವ ಹುನ್ನಾರದಿಂದಲೇ, ಖರ್ಗೆ ಅವರ ಭಾಷಣವನ್ನು ಕಡತದಿಂದ ಕಿತ್ತುಹಾಕಲಾಗಿದೆ. ಖರ್ಗೆ ತಮ್ಮ ಭಾಷಣದಲ್ಲಿ ದಲಿತರು, ತಳಸಮುದಾಯವರು ಹಾಗೂ ಹಿಂದುಳಿದ ವರ್ಗಗಳ ಸಾಮಾಜಿಕ ನ್ಯಾಯದ ವಿಷಯಗಳನ್ನು ಎತ್ತಿದ್ದರು. ಇದೇ ಭಾಗಗಳನ್ನು ಮೋದಿ ಸರ್ಕಾರ ಕಿತ್ತುಹಾಕಿದೆ ಎಂದು ಕಾಂಗ್ರೆಸ್ ಆರೋಪಿಸಿದೆ. ಇದು, ಅಕ್ಷರಶಃ ಬಿಜೆಪಿಯ ಜಾತಿಗ್ರಸ್ತ ಮನುವಾದಿ ಧೋರಣೆಯ ಭಾಗವೇ ಆಗಿದೆ. ದಲಿತರ ಅಭಿವ್ಯಕ್ತಿಯ ಮೇಲೆ ನಡೆಯುತ್ತಿರುವ ದಬ್ಬಾಳಿಕೆಯೂ ಆಗಿದೆ.

ಸಂಸದೀಯ ಪ್ರಜಾಪ್ರಭುತ್ವದಲ್ಲಿ ಭಿನ್ನಾಭಿಪ್ರಾಯ, ವಿರೋಧ, ಸಲಹೆಗಳಿಗೆ ಮುಕ್ತ ಅವಕಾಶವಿದೆ. ಆದರೆ, ಮೋದಿ ಸರ್ಕಾರವು ಸಂಸದೀಯ ವ್ಯವಸ್ಥೆಯನ್ನು ತನ್ನ ಸ್ವೇಚ್ಛೆಗೆ ತಕ್ಕಂತೆ ಬಗ್ಗಿಸಿಕೊಂಡು ವಿಕೃತಗೊಳಿಸುತ್ತಿದೆ. ಸಂಸತ್ತಿನ ಕಾರ್ಯ-ಕಲಾಪಗಳನ್ನು ನಡೆಸುವವರನ್ನು ಕೈಗೊಂಬೆ ಮಾಡಿಕೊಂಡು, ವಿರೋಧಕ್ಕೆ ಅಸ್ಪದವೇ ಇಲ್ಲದಂತೆ ಮಾಡಿದೆ. ದಾಖಲೆ ದಸ್ತಾವೇಜುಗಳಲ್ಲಿಯೂ ದಲಿತ-ದಮನಿತ-ಆದಿವಾಸಿಗಳ ದನಿ ಉಳಿಯಕೂಡದೆಂಬ ಈ ಮನೋಭಾವ ಸರ್ವಥಾ ಸರಿಯಲ್ಲ.

ಯಾವುದೇ ಸ್ಪಷ್ಟ ಕಾರಣ ಅಥವಾ ಸೂಚನೆ ನೀಡದೆ ಖರ್ಗೆ ಅವರ ಭಾಷಣದ ಬಹುಭಾಗವನ್ನು ಕಡತದಿಂದ ತೆಗೆಯುವುದು ವಿಪಕ್ಷ ನಾಯಕರ ಗೌರವಕ್ಕೆ ಧಕ್ಕೆ ಉಂಟು ಮಾಡುತ್ತದೆ. ದಲಿತ ದನಿಯನ್ನು ಹತ್ತಿಕ್ಕುತ್ತದೆ. ದಲಿತ ಸಮುದಾಯದಿಂದ ಬಂದವರು ಸಾಮಾಜಿಕ ನ್ಯಾಯದ ಕುರಿತು ಮಾತನಾಡದಂತೆ ತಡೆಯುವ ದುಷ್ಕೃತವೂ ಆಗಿದೆ. ಇದು ಸಂಸತ್ತಿನಲ್ಲಿ ವಿರೋಧ ಪಕ್ಷದ ಸ್ವಾತಂತ್ರ್ಯ, ದಲಿತರ ಧ್ವನಿಯ ಹರಣ ಹಾಗೂ ಜಾತಿವ್ಯವಸ್ಥೆ ಮುಂದುವರಿಕೆಯನ್ನು ಸ್ಪಷ್ಟವಾಗಿ ತೋರಿಸಿದೆ. ಸಂವಿಧಾನ ಮತ್ತು ಪ್ರಜಾಪ್ರಭುತ್ವವನ್ನು ಅಪಮಾನಿಸಿದೆ. ಸಂಸತ್ತಿನ ಮೇಲ್ಮನೆಯ ಪ್ರತಿಪಕ್ಷದ ನಾಯಕನ ಮಾತುಗಳನ್ನು ಕಾರಣ ಕೂಡ ನೀಡದೆ ಕಿತ್ತು ಹಾಕುವುದು ,ವಿಶ್ವದ ಜನತಂತ್ರದ ತಾಯಿ ಭಾರತ ಎಂದು ಎದೆಯುಬ್ಬಿಸಿ ಹೇಳಿಕೊಳ್ಳುವವರಿಗೆ ಶೋಭಿಸುತ್ತದೆಯೇ?

ಪತ್ರಿಕೆ ಓದುವ ಹವ್ಯಾಸ ಬೆಳಸಿಕೊಳ್ಳಿ

ಪುಲ್ವಾಮಾ ದಾಳಿಗೆ ಏಳು ವರ್ಷ ಇಂದಿಗೂ ಪ್ರಶ್ನೆಗಳೇ ಹೆಚ್ಚು; ಉತ್ತರಿಸಬೇಕಾದವರು ಗಪ್‌ಚುಪ್!


ಆನಂದೋ ಭಕ್ತೊ ಪ್ರಕಟಿಸಿದ ತನಿಖಾ ವರದಿಗಳು ರಾಷ್ಟ್ರಮಟ್ಟದಲ್ಲಿ ಹೆಚ್ಚು ಗಮನ ಸೆಳೆದಿರುವಂತದ್ದು. ಭಕ್ತೊ ನಡೆಸಿದ ತನಿಖೆ ಪ್ರಕಾರ ಪುಲ್ವಾಮಾ ದಾಳಿಗೂ ಮುನ್ನವೇ ಜೈಶ್-ಎ-ಮೊಹಮ್ಮದ್ () ಉಗ್ರ ಸಂಘಟನೆಯು ದಾಳಿ ನಡೆಸಲು ಸಂಚು ರೂಪಿಸುತ್ತಿರುವ ಬಗ್ಗೆ ಸುಮಾರು 11-12 ಗುಪ್ತಚರ ಎಚ್ಚರಿಕೆಗಳು ಬಂದಿದ್ದವು.

ಏಳು ವರ್ಷಗಳ ಹಿಂದೆ ಇದೇ ದಿನ, ಜಮ್ಮು ಮತ್ತು ಕಾಶ್ಮೀರದ ಪುಲ್ವಾಮಾದಲ್ಲಿ ಜಿಲ್ಲೆಯ ಲೆಥ್ಪೊರದ ರಾಷ್ಟ್ರೀಯ ಹೆದ್ದಾರಿಯಲ್ಲಿ ಸಾಗುತ್ತಿದ್ದ ಭದ್ರತಾ ಸಿಬ್ಬಂದಿಗಳಿದ್ದ ವಾಹನದ ಮೇಲೆ ಬಾಂಬ್ ದಾಳಿ ನಡೆದಿತ್ತು. ಈ ದಾಳಿಯಲ್ಲಿ ಕೇಂದ್ರ ಮೀಸಲು ಪೊಲೀಸ್ ಪಡೆಯ 40 ಮಂದಿ ಯೋಧರು ಹುತಾತ್ಮರಾಗಿದ್ದರು. ಇದಾದ ಬಳಿಕ 2019ರ ಫೆಬ್ರವರಿ 26ರಂದು ಪುಲ್ವಾಮಾ ಪ್ರತೀಕಾರವಾಗಿ ಎಲ್‌ಒಸಿ ದಾಟಿ ಪಾಕಿಸ್ತಾನದ ಬಾಲಕೋಟ್‌ನಲ್ಲಿ ಭಾರತ ವೈಮಾನಿಕ ದಾಳಿ ನಡೆಸಿದೆ ಎಂದು ಹೇಳಿತು. ಈ ಎಲ್ಲಾ ಘಟನೆ ನಡೆದು ಏಳು ವರ್ಷಗಳಾಗಿವೆ. ಆದರೆ ಇಂದಿಗೂ ಹಲವು ಪ್ರಶ್ನೆಗಳು ಉತ್ತರವಿಲ್ಲದೆ ಉಳಿದಿದೆ. ಉತ್ತರ ನೀಡಬೇಕಾದವರು ಗಪ್‌ಚುಪ್ ಆಗಿದ್ದಾರೆ ಮತ್ತು ಇತರರನ್ನೂ ಮೌನವಾಗಿಸುತ್ತಿದ್ದಾರೆ!

ಈ ದಾಳಿಗಳಿಗೂ 2019ರ ಲೋಕಸಭೆ ಚುನಾವಣೆಗೂ ನಂಟು ಹೆಣೆದುಕೊಂಡಿದ್ದು, ಬರೀ ವಿಪಕ್ಷಗಳಲ್ಲ, ಕರ್ನಾಟಕ ಮಾಜಿ ಮುಖ್ಯಮಂತ್ರಿ ಬಿ ಎಸ್ ಯಡಿಯೂರಪ್ಪ ಸೇರಿದಂತೆ ಕೆಲವು ಬಿಜೆಪಿಯ ನಾಯಕರು, ಅದರಲ್ಲೂ ಮುಖ್ಯವಾಗಿ ಬಿಜೆಪಿ ಹಿನ್ನೆಲೆಯುಳ್ಳ ಆಗಿನ ಜಮ್ಮು ಮತ್ತು ಕಾಶ್ಮೀರದ ರಾಜ್ಯಪಾಲರಾಗಿದ್ದ ಸತ್ಯಪಾಲ್ ಮಲಿಕ್ ಎತ್ತಿದ ಪ್ರಶ್ನೆಗಳು ಪ್ರಧಾನಿಗೆ ನುಂಗಲಾರದ ತುತ್ತಾಗಿ ಪರಿಣಮಿಸಿತ್ತು. ಅದರಲ್ಲೂ 2021ರ ಫೆಬ್ರವರಿಯಲ್ಲಿ ಆಂಗ್ಲ ಪತ್ರಿಕೆ ಫ್ರಂಟ್‌ಲೈನ್‌ನ ಸಂಚಿಕೆಯಲ್ಲಿ ಹಿರಿಯ ಸಂಪಾದಕ ಆನಂದೋ ಭಕ್ತೊ ಬಹಿರಂಗಪಡಿಸಿದ ಮಾಹಿತಿ ನಮ್ಮೆಲ್ಲರವನ್ನೂ ಹುಬ್ಬೇರಿಸಿ ನೋಡುವಂತೆ ಮಾಡಿತ್ತು. ಆದರೆ ಗೋದಿ ಮಾಧ್ಯಮಗಳಿಗೆ ಮಾತ್ರ ಇಂದಿಗೂ ಈ ಎಲ್ಲಾ ಅನುಮಾನ, ಪ್ರಶ್ನೆಗಳು ಸಾಸಿವೆಯಷ್ಟು ಸಣ್ಣದಾಗಿಯಾದರೂ ಕಣ್ಣಿಗೆ ಕಾಣುತ್ತಿಲ್ಲ.

ಆನಂದೋ ಭಕ್ತೊ ಪ್ರಕಟಿಸಿದ ತನಿಖಾ ವರದಿಗಳು ರಾಷ್ಟ್ರಮಟ್ಟದಲ್ಲಿ ಹೆಚ್ಚು ಗಮನ ಸೆಳೆದಿರುವಂತದ್ದು. ಭಕ್ತೊ ನಡೆಸಿದ ತನಿಖೆ ಪ್ರಕಾರ ಪುಲ್ವಾಮಾ ದಾಳಿಗೂ ಮುನ್ನವೇ ಜೈಶ್-ಎ-ಮೊಹಮ್ಮದ್ () ಉಗ್ರ ಸಂಘಟನೆಯು ದಾಳಿ ನಡೆಸಲು ಸಂಚು ರೂಪಿಸುತ್ತಿರುವ ಬಗ್ಗೆ ಸುಮಾರು 11-12 ಗುಪ್ತಚರ ಎಚ್ಚರಿಕೆಗಳು ಬಂದಿದ್ದವು. ಅಷ್ಟು ಮಾತ್ರವಲ್ಲದೆ ದಾಳಿಯ ಮಾಸ್ಟರ್‌ಮೈಂಡ್ ಎಂದು ಕರೆಯಲಾಗುವ ಮುದಾಸಿರ್ ಅಹ್ಮದ್ ಖಾನ್ ಬಗ್ಗೆಗಿನ ಮಾಹಿತಿ, ಬಾಂಬ್ ದಾಳಿಗೆ ನಡೆಸುತ್ತಿರುವ ಸಂಚಿನ ಬಗ್ಗೆ ಹಲವು ದಿನಗಳ ಮುನ್ನವೇ ಮಾಹಿತಿ ತಿಳಿದಿತ್ತು. ಇವೆಲ್ಲವನ್ನೂ ಭಕ್ತೊ ತಮ್ಮ ತನಿಖಾ ವರದಿಯಲ್ಲಿ ದಾಖಲೆ ಸಹಿತವಾಗಿ ವಿವರಿಸಿದ್ದಾರೆ.

2019ರ ಫೆಬ್ರವರಿ 13ರಂದು ಅಂದರೆ ಪುಲ್ವಾಮಾ ದಾಳಿ ನಡೆಯುವ ಒಂದು ದಿನಕ್ಕೂ ಮುನ್ನವೇ ಐಇಡಿ ದಾಳಿಯ ಬಗ್ಗೆ ನಿರ್ದಿಷ್ಟ ಸುಳಿವು ಸಿಕ್ಕಿದ್ದರೂ ಮರುದಿನ 2,500ಕ್ಕೂ ಹೆಚ್ಚು ಸಿಬ್ಬಂದಿಗಳಿದ್ದ ಬೃಹತ್ ಬೆಂಗಾವಲು ಪಡೆಗೆ ರಸ್ತೆಯ ಮೂಲಕ ಪ್ರಯಾಣಿಸಲು ಸರ್ಕಾರ ಅವಕಾಶ ನೀಡಿದ್ದು ಯಾಕೆ ಎಂದು ಬೊಟ್ಟು ಮಾಡಿ ಕೇಳಿದಾಗ ಬರುವ ಉತ್ತರ ಚುಪ್. ಬಿಜೆಪಿಯ



ಸತ್ಯಪಾಲ್ ಮಲಿಕ್ ಜತೆಯೂ ನಡೆದುಕೊಂಡಿರುವುದು ಹೀಗೆಯೇ.

2019ರ ಪುಲ್ವಾಮಾ ದಾಳಿಯ ಸಮಯದಲ್ಲಿ ಜಮ್ಮು ಮತ್ತು ಕಾಶ್ಮೀರದ ರಾಜ್ಯಪಾಲರಾಗಿದ್ದವರು ದಿವಂಗತ ಸತ್ಯಪಾಲ್ ಮಲಿಕ್. ಕೇಂದ್ರ ಸರ್ಕಾರದ ವಿರುದ್ಧ ಗಂಭೀರವಾದ ಭದ್ರತಾ ಲೋಪದ ಆರೋಪಗಳನ್ನು ಮಾಡಿದ್ದರು. ಬಿಜೆಪಿಯ ಮಲಿಕ್ ಹೇಳುವಂತೆ, ''ಸಿಆರ್‌ಪಿಎಫ್ ಯೋಧರನ್ನು ಕರೆದೊಯ್ಯಲು 5 ವಿಮಾನಗಳ ವ್ಯವಸ್ಥೆ ಮಾಡಬೇಕು ಎಂದು ಗೃಹ ಸಚಿವಾಲಯಕ್ಕೆ ಮನವಿ ಮಾಡಲಾಗಿತ್ತು. ಆದರೆ ಕೇಂದ್ರ ಸರ್ಕಾರವು ಈ ಮನವಿಯನ್ನು ತಿರಸ್ಕರಿಸಿದೆ. ಇದರಿಂದಾಗಿ ಯೋಧರು ರಸ್ತೆ ಮಾರ್ಗವಾಗಿ ಪ್ರಯಾಣಿಸುವಂತಾಯಿತು. ಇದು ದಾಳಿಗೆ ಪ್ರಮುಖ ಕಾರಣ''.

ಅಷ್ಟು ಮಾತ್ರವಲ್ಲದೆ ಈ ಭದ್ರತಾ ಲೋಪಗಳ ಬಗ್ಗೆ ಎಲ್ಲಿಯೂ ಮಾತನಾಡದಂತೆ ಪ್ರಧಾನಿ ನರೇಂದ್ರ ಮೋದಿ ಮತ್ತು ರಾಷ್ಟ್ರೀಯ ಭದ್ರತಾ ಸಲಹೆಗಾರ ಅಜಿತ್ ದೋವಲ್ ತಮಗೆ ಸೂಚಿಸಿದ್ದರು. ಕೇಂದ್ರ ಸರ್ಕಾರವು ತನ್ನ ವೈಫಲ್ಯಗಳನ್ನು ಮುಚ್ಚಿಹಾಕಿ, 2019ರ ಚುನಾವಣೆಯಲ್ಲಿ ರಾಜಕೀಯ ಲಾಭ ಪಡೆಯಲು ಈ ಘಟನೆಗಳನ್ನು ಬಳಸಿಕೊಂಡಿತ್ತು ಎಂದೂ ಮಲಿಕ್ ದೂರಿದ್ದರು. ಈ ಸಂದರ್ಭದಲ್ಲಿ ಮಾಜಿ ಸಿಎಂ ಯಡಿಯೂರಪ್ಪ ಅವರ ಬಾಯಿಂದ ಹೊರಳಿದ ಸತ್ಯವನ್ನೂ ನೆನಪಿಸೋಣ. 2019ರಲ್ಲಿ ಯಡಿಯೂರಪ್ಪ ಅವರು, ''ಬಾಲಾಕೋಟ್ ವೈಮಾನಿಕ ದಾಳಿಯು ಮುಂಬರುವ ಚುನಾವಣೆಯಲ್ಲಿ ಬಿಜೆಪಿಗೆ 22ಕ್ಕೂ ಅಧಿಕ ಲೋಕಸಭೆ ಸ್ಥಾನಗಳನ್ನು ಗೆಲ್ಲಲು ಸಹಾಯ ಮಾಡಲಿದೆ'' ಎಂದು ಹೇಳಿದ್ದರು. ಅಂದರೆ ಭದ್ರತಾ ವೈಫಲ್ಯ ನಿರ್ಲಕ್ಷಿಸಿ ದಾಳಿ ನಡೆಯಲು ಅವಕಾಶ ಮಾಡಿಕೊಟ್ಟಿದ್ದು, ಚುನಾವಣೆಯ ಲಾಭಕ್ಕಾಗಿಯೇ?

ಈ ಸಂದರ್ಭದಲ್ಲಿ ಪುಲ್ವಾಮಾ ದಾಳಿ ಬಗ್ಗೆ ಗೃಹ ಸಚಿವ ಜಿ. ಪರಮೇಶ್ವರ್, ಸಮಾಜವಾದಿ ಪಕ್ಷದ ಸಂಸದ ಸನಾತನ್ ಪಾಂಡೆ ನೀಡಿರುವ ಹೇಳಿಕೆಗಳನ್ನೂ ಒಮ್ಮೆ ನೆನಪಿಸಿಕೊ ಳ್ಳೋಣ. 2025ರ ಡಿಸೆಂಬರ್ 31ರಂದು ಸನಾತನ್ ಪಾಂಡೆ ''ಪುಲ್ವಾಮಾ ದಾಳಿಯು 2019ರ ಚುನಾವ ಣೆಯಲ್ಲಿ ಗೆಲ್ಲಲು ಬಿಜೆಪಿ ಹೂಡಿದ ರಾಜಕೀಯ ಪಿತೂರಿ. ನೀಡಿದ ಭರವಸೆ ಈಡೇರಿಸಲಾಗದ ಕಾರಣ ಜನರ ಗಮನವನ್ನು ಬೇರೆಡೆ ಸೆಳೆಯಲು ಈ ದಾಳಿಗಳನ್ನು ಸಂಘಟಿಸಲಾಗಿದೆ'' ಎಂದು ಹೇಳಿಕೆ ನೀಡಿದ್ದು, ಅದು ವಿವಾದಕ್ಕೆ ಕಾರಣವಾಗಿತ್ತು. ಇನ್ನೊಂದೆಡೆ 2024ರ ಏಪ್ರಿಲ್‌ನಲ್ಲಿ ಪರಮೇಶ್ವರ್ ಅವರು ಪುಲ್ವಾಮಾ ದಾಳಿಯಲ್ಲಿ ಕೇಂದ್ರ ಸರ್ಕಾರದ ಪಾತ್ರದ ಬಗ್ಗೆ ಅನುಮಾನ ವ್ಯಕ್ತಪಡಿಸಿದ್ದರು. ಬ್ರಿಟಿಷ್ ಪತ್ರಿಕೆ ದಿ ಗಾರ್ಡಿಯನ್ ಪ್ರಕಟಿಸಿದ ವರದಿ ಉಲ್ಲೇಖಿಸಿದ್ದ ಪರಮೇಶ್ವರ್ ಅವರು, 2019ರ ಚುನಾವಣೆಗೂ ಮುನ್ನ ನಡೆದ ಈ ದಾಳಿಯ ಹಿಂದೆ ಬಿಜೆಪಿಯ ತಂತ್ರವಿತ್ತೇ ಎಂಬರ್ಥದಲ್ಲಿ ಪ್ರಶ್ನಿಸಿದ್ದರು. ಪುಲ್ವಾಮಾ ದಾಳಿ ದೊಡ್ಡ ಮಟ್ಟದ ಗುಪ್ತಚರ ವೈಫಲ್ಯ ಎಂದು ಟೀಕಿಸಿದ್ದರು. ದಾಳಿಯ ಹೊಣೆಯನ್ನು ಜೈಶ್-ಎ-ಮೊಹಮ್ಮದ್ ಹೊತ್ತಿರುವಾಗ ನಿಮ್ಮ ತಗಾದೆ ಯಾಕೆ ಎಂಬುದು ಬಿಜೆಪಿಗರ ಪ್ರಶ್ನೆ.

ಪುಲ್ವಾಮಾದಲ್ಲಿ ದಾಳಿ ನಡೆಸಿದ್ದು ಪಾಕಿಸ್ತಾನ ಮೂಲದ ಭಯೋತ್ಪಾದಕ ಸಂಘಟನೆ ಜೈಶ್-ಎ-ಮೊಹಮ್ಮದ್ (). ಆ ಸಂಘಟನೆಯೇ ದಾಳಿಯ ಹೊಣೆಯನ್ನು ಹೊತ್ತುಕೊಂಡಿದೆ. ಪುಲ್ವಾಮಾ ಜಿಲ್ಲೆಯ ಕಾಕಪೋರಾ ನಿವಾಸಿ, ಆತ್ಮಾಹುತಿ ದಾಳಿಕೋರ ಆದಿಲ್ ಅಹ್ಮದ್ ದಾರ್ (22 ವರ್ಷ) ಎಂಬಾತ ಸ್ಫೋಟಕಗ ಳನ್ನು ಹೊಂದಿದ್ದ ವಾಹನವನ್ನು ಸಿಆರ್‌ಪಿಎಫ್ ಬೆಂಗಾವಲು ಪಡೆಗೆ ಗುದ್ದಿಸಿ ಈ ದಾಳಿಯನ್ನು ನಡೆಸಿದ್ದನು. ರಾಷ್ಟ್ರೀಯ ತನಿಖಾ ಸಂಸ್ಥೆ () ಸಲ್ಲಿಸಿದ ಆರೋಪಪಟ್ಟಿಯ ಪ್ರಕಾರ, ಈ ದಾಳಿಯ ಮುಖ್ಯ ಸಂಚುಕೋರ ಜೈಶ್-ಎ-ಮೊಹಮ್ಮದ್ ಸಂಘಟನೆಯ ಮುಖ್ಯಸ್ಥ ಮಸೂದ್ ಅಜ್ಹರ್. ಹೀಗಿರುವಾಗ ದಾಳಿ ರಾಜಕೀಯ ಲಾಭಕ್ಕಾಗಿ ನಡೆದ ಪಿತೂರಿ ಎನ್ನುವುದು ದೇಶದ್ರೋಹ ಎಂಬುದು ಬಿಜೆಪಿಗರ ವಾದ. ಆದರೆ ಸುಮಾರು 11-12 ಗುಪ್ತಚರ ಎಚ್ಚರಿಕೆಗಳು ಬಂದಿದ್ದರೂ ಸರ್ಕಾರ ನಿರ್ಲಕ್ಷಿಸಿದ್ದು ಯಾಕೆ ಎಂಬ ಪ್ರಶ್ನೆಗೆ ಬಿಜೆಪಿಗರಾಗಲಿ ಅಥವಾ ಪ್ರಧಾನಿ ನರೇಂದ್ರ ಮೋದಿ ಬಳಿಯಾಗಲಿ ಉತ್ತರವಿಲ್ಲ! ದೇಶಭಕ್ತಿ, ದೇಶದ್ರೋಹ ಎಂಬ ಚರ್ಚೆಗೆ ಇಳಿದು ಈ ಭದ್ರತಾ ವೈಫಲ್ಯದ ಬಗ್ಗೆ ಜನರು ಮರೆಯುವಂತೆ ಮಾಡುವುದು ಅಲ್ಲವೇ? ಗುಪ್ತಚರ ಮಾಹಿತಿ ಇದ್ದರೂ ಅದನ್ನು ನಿರ್ಲಕ್ಷಿಸಿ 40 ಜೀವಗಳನ್ನು ಬಲಿಪಡೆದ ಪ್ರಧಾನಿ ನರೇಂದ್ರ ಮೋದಿ ಸರ್ಕಾರ ತಮ್ಮ ವೈಫಲ್ಯವನ್ನು ಒಪ್ಪಿಕೊಳ್ಳುವುದಾದರೂ ಯಾವಾಗ?

ತರ್ಕವಿಲ್ಲದ ಭಯ ಫೋಬಿಯಾ ಕುರಿತು ನಿಮಗೆಷ್ಟು ಗೊತ್ತು?

ಫೋಬಿಯಾ ಎದುರಾದಾಗ ವ್ಯಕ್ತಿ ತೀವ್ರ ಆತಂಕಕ್ಕೊಳಗಾಗಿ, ಆ ಪರಿಸ್ಥಿತಿಯಿಂದ ತಪ್ಪಿಸಿಕೊಳ್ಳಲು ಏನು ಬೇಕಾದರೂ ಮಾಡಲು ಸಿದ್ಧನಾಗಿರುತ್ತಾನೆ. ಈ ಸಮಸ್ಯೆ ಬಾಲ್ಯದಲ್ಲೇ ಆರಂಭವಾಗಿ, ಚಿಕಿತ್ಸೆ ಇಲ್ಲದಿದ್ದರೆ ದೀರ್ಘಕಾಲ ಮುಂದುವರಿಯುತ್ತದೆ.

ಭಯ ಎಂದರೆ ಅಪಾಯವನ್ನು ಗುರುತಿಸಿದಾಗ ಮನುಷ್ಯನ ಮನಸ್ಸು ಮತ್ತು ದೇಹ ತಕ್ಷಣ ಪ್ರತಿಕ್ರಿಯಿಸುವ ಒಂದು ಸಹಜ ಸ್ಥಿತಿ. ಇದು ನಮ್ಮನ್ನು ನಾವು ರಕ್ಷಿಸಿಕೊಳ್ಳಲು ಪ್ರಕೃತಿಯೇ ನೀಡಿರುವ ಎಚ್ಚರಿಕೆಯ ವ್ಯವಸ್ಥೆ. ಏನಾದರೂ ಸಂಭವಿಸಬಹುದು ಎಂದು ಮೆದುಳು ಊಹಿಸಿದ ಕ್ಷಣದಲ್ಲೇ ಭಯ ಶುರುವಾಗುತ್ತದೆ. ಆದರೆ ಇದೇ ಭಯ, ಒಂದು ಹಂತದ ಬಳಿಕ ಅತಿರೇಕವಾಗಿ, ತರ್ಕವಿಲ್ಲದಂತೆ, ನಿರಂತರವಾಗಿ ಮನುಷ್ಯನ ಆಲೋಚನೆ, ನಿರ್ಧಾರ ಮತ್ತು ದಿನಚರಿಯ ಮೇಲೆ ಪರಿಣಾಮ ಬೀರಲು ಆರಂಭಿಸಿದಾಗ ಅದು ಫೋಬಿಯಾ ಆಗುತ್ತದೆ.

ಮನೋವಿಜ್ಞಾನದ ಪ್ರಕಾರ, ಫೋಬಿಯಾ ಒಂದು ಆತಂಕ ಸಂಬಂಧಿತ ಮನೋವೈಕಲ್ಯ ( ). ಇದು ಸಾಮಾನ್ಯ ಭಯಕ್ಕಿಂತ ಭಿನ್ನವಾದುದು. ನಿರ್ದಿಷ್ಟ ವಸ್ತು, ಪರಿಸ್ಥಿತಿ, ಜೀವಿ ಅಥವಾ ಸಾಮಾಜಿಕ ಸಂದರ್ಭ ಎದುರಾದಾಗ, ವ್ಯಕ್ತಿಯ ಮನಸ್ಸು ಅದನ್ನು ಅತಿಯಾದ ಅಪಾಯವೆಂದು ಅರ್ಥೈಸುತ್ತದೆ. ಈ ಅರ್ಥೈಸುವಿಕೆ ತರ್ಕಾಧಾರಿತವಾಗಿರದೆ, ಹಿಂದಿನ ಅನುಭವಗಳು, ನೆನಪುಗಳು ಹಾಗೂ ಕಲ್ಪನೆಗಳಿಂದ ರೂಪುಗೊಂಡಿರುತ್ತದೆ. ವ್ಯಕ್ತಿಗೆ ತನ್ನ ಭಯ ಅತಿರೇಕ ಎಂಬ ಅರಿವಿದ್ದರೂ, ಅದನ್ನು ತಕ್ಷಣ ನಿಯಂತ್ರಿಸುವ ಸಾಮರ್ಥ್ಯ ಅವನ ಕೈಯಲ್ಲಿರುವುದಿಲ್ಲ.

ಅಂತಹ ಸಂದರ್ಭಗಳಲ್ಲಿ ದೇಹವೂ ತೀವ್ರವಾಗಿ ಪ್ರತಿಕ್ರಿಯಿಸುತ್ತದೆ. ಹೃದಯ ಬಡಿತ ವೇಗವಾಗುವುದು, ಉಸಿರಾಟದಲ್ಲಿ ಅಸಹಜ ಏರಿಳಿತ, ಬೆವರುವುದು, ನಡುಕ ಕಾಣಿಸಿಕೊಳ್ಳುವುದು ಇವು ಫೋಬಿಯಾದ ಸಾಮಾನ್ಯ ಲಕ್ಷಣಗಳು. ಕೆಲವರಿಗೆ ಆ ಜಾಗದಿಂದಲೇ ತಪ್ಪಿಸಿಕೊಂಡು ಓಡಿಬಿಡಬೇಕು ಎನಿಸುತ್ತದೆ. ಈ ದೈಹಿಕ-ಮಾನಸಿಕ ಪ್ರತಿಕ್ರಿಯೆಗಳು ಅಪಾಯದಿಂದ ರಕ್ಷಿಸಿಕೊಳ್ಳುವ ಉದ್ದೇಶದಿಂದ ಹುಟ್ಟಿದರೂ, ಫೋಬಿಯಾದಲ್ಲಿ ಅವೇ ಪ್ರತಿಕ್ರಿಯೆಗಳು ಮನುಷ್ಯನ ದಿನನಿತ್ಯದ ಬದುಕಿಗೆ ಅಡ್ಡಿಯುಂಟುಮಾಡುತ್ತವೆ.

ಫೋಬಿಯಾಗ ಇರುವ ವ್ಯಕ್ತಿ ನಾನು ನಿಯಂತ್ರಣ ಕಳೆದುಕೊಳ್ಳುವೆನಾ?, ಏನಾದರೂ ಆದರೆ ಯಾರೂ ಸಹಾಯಕ್ಕೆ ಬರುವುದಿಲ್ಲವೇ?, ನಾನು ಹಾಸ್ಯಾಸ್ಪದನಾಗಿಬಿಡುವೆನೇ? ಎಂಬ ಅಜ್ಞಾತ ಪ್ರಶ್ನೆಗಳು ಫೋಬಿಯಾವನ್ನು ಹೆಚ್ಚಿಸುತ್ತವೆ. ಅದಕ್ಕಾಗಿಯೇ ಫೋಬಿಯಾದಲ್ಲಿ ತರ್ಕ ಕೆಲಸ ಮಾಡುವುದಿಲ್ಲ. ವ್ಯಕ್ತಿಗೆ ತನ್ನ ಭಯ ಅತಿರೇಕ ಎನ್ನುವುದು ಗೊತ್ತಿರುತ್ತದೆ; ಆದರೂ ದೇಹ ಅದನ್ನು ನಂಬಲು ಸಿದ್ಧವಿರುವುದಿಲ್ಲ.



ಫೋಬಿಯಾಗಳನ್ನು ಹೀಗೆ ಗುರುತಿಸಲಾಗುತ್ತದೆ..

1. ನಿರ್ದಿಷ್ಟ ಫೋಬಿಯಾ

ನಿರ್ದಿಷ್ಟ ವಸ್ತು, ಜೀವಿ ಅಥವಾ ಪರಿಸ್ಥಿತಿಗೆ ಸಂಬಂಧಿಸಿದ ಅತಿಯಾದ, ತರ್ಕವಿಲ್ಲದ ಭಯವನ್ನು ನಿರ್ದಿಷ್ಟ ಫೋಬಿಯಾ ಎಂದು ಕರೆಯಲಾಗುತ್ತದೆ. ಉದಾಹರಣೆಗೆ ಎತ್ತರ, ಕತ್ತಲೆ, ಜೇಡ, ಹಾವು, ರಕ್ತ, ಸೂಜಿ, ವಿಮಾನ ಪ್ರಯಾಣ ಅಥವಾ ಮುಚ್ಚಿದ ಸ್ಥಳಗಳು. ಈ ಫೋಬಿಯಾ ಎದುರಾದಾಗ ವ್ಯಕ್ತಿ ತೀವ್ರ ಆತಂಕಕ್ಕೊಳಗಾಗಿ, ಆ ಪರಿಸ್ಥಿತಿಯಿಂದ ತಪ್ಪಿಸಿಕೊಳ್ಳಲು ಏನು ಬೇಕಾದರೂ ಮಾಡಲು ಸಿದ್ಧನಾಗಿರುತ್ತಾನೆ. ಈ ಸಮಸ್ಯೆ ಬಾಲ್ಯದಲ್ಲೇ ಆರಂಭವಾಗಿ, ಚಿಕಿತ್ಸೆ ಇಲ್ಲದಿದ್ದರೆ ದೀರ್ಘಕಾಲ ಮುಂದುವರಿಯುತ್ತದೆ.

ನಿರ್ದಿಷ್ಟ ಫೋಬಿಯಾದಲ್ಲೂ ಕೆಲ ಉಪ ಪ್ರಕಾರಗಳಿವೆ..

2. ಸಾಮಾಜಿಕ ಫೋಬಿಯಾ

ಜನರ ಮುಂದೆ ಮಾತನಾಡುವುದು, ಅಭಿಪ್ರಾಯ ಹೇಳುವುದು, ಸಾರ್ವಜನಿಕವಾಗಿ ತಪ್ಪು ಮಾಡುವೆನೇನೋ ಅಥವಾ ಹಾಸ್ಯಾಸ್ಪದನಾಗಿಬಿಡುವೆನೋ ಎಂಬ ಭಯದಿಂದ ಉಂಟಾಗುವ ಫೋಬಿಯಾ ಇದು. ಅಪರಿಚಿತರ ಜೊತೆ ಮಾತನಾಡಲು ಭಯ, ಜನರು ಗಮನಿಸುತ್ತಾರೆ ಎಂಬ ಆತಂಕ, ಜನರನ್ನು ನೋಡಿದಾಗ ಮುಖ ಕೆಂಪಾಗುವುದು, ಅಪರಿಚಿತರ ಜೊತೆ ಮಾತನಾಡುವಾಗ ಬೆವರು, ದೇಹದಲ್ಲಿ ಸಣ್ಣ ನಡುಕ ಕಾಣಿಸಿಕೊಳ್ಳುವುದು, ಜನರ ಜೊತೆ ಮಾತನಾಡಲು ಹಿಂಜರಿಕೆ, ಸಾರ್ವಜನಿಕ ಪ್ರದೇಶದಲ್ಲಿ ಅಡಗಿಕೊಳ್ಳುವ ಸ್ವಭಾವ ಇತ್ಯಾದಿ. ಇಲ್ಲಿ ಭಯ ವಸ್ತುವಿನೆಡೆಗಲ್ಲ, ಜನರ ತೀರ್ಪಿನೆಡೆಗಿರುತ್ತದೆ. ಈ ಫೋಬಿಯಾ ವ್ಯಕ್ತಿಯ ಆತ್ಮವಿಶ್ವಾಸವನ್ನು ಕುಗ್ಗಿಸಿ, ಅವನ ಪ್ರತಿಭೆ, ಶಿಕ್ಷಣ ಹಾಗೂ ವೃತ್ತಿಜೀವನದ ಮೇಲೆ ಗಂಭೀರ ಪರಿಣಾಮ ಬೀರುತ್ತದೆ.

3. ಆಗೋರಾ ಫೋಬಿಯಾ

ಜನಸಂದಣಿ, ತೆರೆದ ಸ್ಥಳಗಳು, ಬಸ್-ರೈಲು ಪ್ರಯಾಣ ಅಥವಾ ಇಲ್ಲಿ ಸಿಕ್ಕಿಹಾಕಿಕೊಂಡರೆ ತಪ್ಪಿಸಿಕೊಳ್ಳಲು ಆಗುವುದಿಲ್ಲ ಎಂಬ ಭಯದಿಂದ ಉಂಟಾಗುವ ಫೋಬಿಯಾ. ಕೆಲವರಿಗೆ ಮನೆಯಿಂದ ಹೊರ ಹೋಗಲೂ ಕಷ್ಟ ಪಡುವಷ್ಟು ಈ ಭಯ ತೀವ್ರವಾಗಿರುತ್ತದೆ. ಇದು ಪ್ಯಾನಿಕ್ ಅಟ್ಯಾಕ್ ಅನುಭವಿಸಿದ ನಂತರ ಬೆಳೆಯುವ ಸಾಧ್ಯತೆ ಹೆಚ್ಚು.

4. ಪ್ಯಾನಿಕ್ ಸಂಬಂಧಿತ ಫೋಬಿಯಾ

ಒಮ್ಮೆ ತೀವ್ರ ಪ್ಯಾನಿಕ್ ಅಟ್ಯಾಕ್ ಅನುಭವಿಸಿದ ವ್ಯಕ್ತಿಗೆ, ಅದೇ ಅನುಭವ ಮರುಕಳಿಸಬಹುದೆಂಬ ಭಯ ಹುಟ್ಟುತ್ತದೆ. ಪರಿಣಾಮವಾಗಿ, ಆ ಪ್ಯಾನಿಕ್ ಆಗಿದ್ದ ಸ್ಥಳಗಳು ಅಥವಾ ಸಂದರ್ಭಗಳಿಂದ ಅವನು ತಪ್ಪಿಸಿಕೊಳ್ಳಲು ಆರಂಭಿಸುತ್ತಾನೆ.

5. ಸಂಕೀರ್ಣ ಫೋಬಿಯಾ

ಒಂದಕ್ಕಿಂತ ಹೆಚ್ಚು ಭಯಗಳು ಒಟ್ಟಾಗಿ ವ್ಯಕ್ತಿಯನ್ನು ಆವರಿಸಿಕೊಳ್ಳುವ ಮನೋಸ್ಥಿತಿಯನ್ನು ಸಂಕೀರ್ಣ ಫೋಬಿಯಾ ಎನ್ನಲಾಗುತ್ತದೆ. ಇದರಲ್ಲಿ ಭಯ ಕೇವಲ ಒಂದು ಕಾರಣಕ್ಕೆ ಸೀಮಿತವಾಗಿರದೆ, ಸಂಬಂಧಗಳು, ನಿರ್ಧಾರಗಳು ಮತ್ತು ಜೀವನಶೈಲಿಯ ಮೇಲೂ ಪ್ರಭಾವ ಬೀರುತ್ತದೆ. ಸಾಮಾನ್ಯವಾಗಿ ಇದು ದೀರ್ಘಕಾಲದ ಮಾನಸಿಕ ಒತ್ತಡ ಅಥವಾ ಅನೇಕ ಆಘಾತಕಾರಿ ಅನುಭವಗಳ ಫಲಿತಾಂಶವಾಗಿರುತ್ತದೆ.

6. ಸಾಂದರ್ಭಿಕ ಫೋಬಿಯಾ

ವಿಶೇಷ ಪರಿಸ್ಥಿತಿಗಳಲ್ಲಿ ಮಾತ್ರ ಉಂಟಾಗುವ ಭಯ ಇದು. ಉದಾಹರಣೆಗೆ ಪರೀಕ್ಷೆ ಬರೆಯುವಾಗ, ಆಸ್ಪತ್ರೆ ನೋಡಿದಾಗ (ಆಪರೇಷನ್, ಸೂಜಿ, ರಕ್ತ), ವಾಹನ ಚಲಾಯಿಸುವಾಗ ಅಥವಾ ವಿಮಾನ ಹತ್ತುವಾಗ. ಈ ಸಂದರ್ಭಗಳಲ್ಲಿ ವ್ಯಕ್ತಿ ಸಾಮಾನ್ಯವಾಗಿದ್ದರೂ, ಆ ಒಂದು ಪರಿಸ್ಥಿತಿ ಎದುರಾದಾಗ ಮಾತ್ರ ತೀವ್ರ ಆತಂಕ ಅನುಭವಿಸುತ್ತಾನೆ.

Printed and Published by: SUNDAR and Owned by: SUNDAR Printed at: SHILPA PUBLICATIONS AND PRINTING PRESS, No. 5-122/2,Ward No.20, Vidya Nagara Colony, Sirwar-584129, Raichur Dist, Karnataka. Published at: No. 5-122/2,Ward No.20, Vidya Nagara Colony, Sirwar-584129, Raichur Dist, Karnataka. Editor: SUNDAR